Reg. No. M. 1550

KODAGU

24—4—1936

IF NOT

delivered

please return to

"KODAGU"

OFFICE,

MERCARA.

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಅಚ್ಚುಮೆಚ್ಚಿನ

ಮುದ್ರಣ ಕಲಸಕ್ಕೆ

"ಕೊಡಗು"

ಪ್ರೆಸ್ಸು.

ಮಡಿಕೇರಿ.

ಹೆಚ್ಚಿನ ವಿಷಯಕ್ಕೆ

ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೨೪—೪—೧೯೩೬ [ಸಂಚಿಕೆ ೪೧

Telephone ;
3145

By Appointment
To H. E The Governor of Madras.

Telegrams:
'PRECIOUS.'



V. SUBRAMANIA IYER.

Jeweller, & Diamond Merchant,

52—22 2 & 3 Kuppumuthu Street Tiruvateswaranpet. POST B X 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI.

BRANCHES:—
1. Madras,
2. Coondapoor.
3 Car Street, Mangalore.
4. Bunder, Mangalore.
5 Shimoga.
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,69,936.

BANKERS AT—
1. Bombay.
2. Calcutta.
3. Karachi.
4. Bangalore.
5 Mysore.
6 Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Authorised, issued and subscribed—Rs. 3,50,000.
Paid up Rs. 2,87,435.
Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—23 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1927 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲಾ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ಕ. 25%
ಎಂಡೋಮೆಂಟ್ ಪಾಲಿಸಿಗಳ ಮೇಲೆ ದಶಕಕ್ಕೆ 20%
ಪಾಲಿಸಿಯು ಶರತ್ತುಗಳು ಅತೀ ಪೂಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲಾಗೂ ಹೊಸದಾಗಿವೆ.
ವಿಜ್ಞಿಸ್ ನಿಯಮಗಳು ಅತೀ ಲಭದಾಯಕವಿದ್ದು
ಪರಿವಾರಂಪರ್ ಕಮಿಶನ್ ನೀಡಲಿರುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಜಿ. ಪಾಲಗಳವ್, ಎಫ್. ಎಫ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಮದ್ರಾಸ್. ಅಥವಾ:—
ಎ. ಎಫ್ ಎಸ್ ಅಯ್ಯಂಗಾರ್.
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,
ಜಾಮರಾಜಪೇಟೆ, [illegible]

52—15

ವಿವಿಧ ವಾರ್ತಾವಳಿ.

ರಷ್ಯದ ಗುಪ್ತ ಸಬ್‌ಮೆರಿನ್‌ಗಳ ಸಂಖ್ಯೆ.

ಪ್ರಪಂಚದ ಯಾವರಾಷ್ಟ್ರಕ್ಕೂ ಇಲ್ಲದಷ್ಟು ದೊಡ್ಡ ಸಬ್‌ಮೆರಿನ್‌ಗಳನ್ನು ರಷ್ಯದವರು ಗುಪ್ತವಾಗಿ ತಯಾರಿಸಿಟ್ಟಿದ್ದಾರೆಂದು ಜರ್ಮನಿಯ ನಾವಾಧಿಕಾರಿಯು ತಿಳಿಸುತ್ತಾನೆ. ಇವುಗಳ ಜೊತೆಗೆ ಈ ವರ್ಷವಿನಲ್ಲಿ ವಿಶೇಷವಾಗಿ ಕಟ್ಟುತ್ತಿದ್ದಾರಂತೆ

ಇತರ ರಾಜ್ಯಗಳಲ್ಲಿರುವ ಸಬ್ ಮೆರಿನ್‌ಗಳ ಸಂಖ್ಯೆ ಹೀಗಿವೆ. ಫ್ರಾನ್ಸ್‌ನಲ್ಲಿ 92; ಯುನೈಟೆಡ್ ಸ್ಟೇಟ್ಸ್ 90; ಇಟಲಿ 77: ಜಪಾನ್ 67; ಬ್ರಿಟನ್ 56: ಜರ್ಮನಿ 78.

—೦೦೦—

ಸಯಾಮಿನ ಮೇಲೂ ಜಪಾನಿನ ಬಲೆ.

ಇದು ವರೆಗೆ ರಷಿಯದ ಮೇಲೆ ಕುಣಿದಾಡುತ್ತಿರುವ ಜಪಾನು ಈಗ ಸಯಾಮಿನ ಮೇಲೆಯೂ ತನ್ನ ವಕ್ರದೃಷ್ಟಿಯನ್ನು ಹಾಕಿದೆಯೆಂದು ತಿಳಿದುಬಂದಿದೆ

ಸರಕಾರದ ಸಹಾಯವನ್ನು ಹೊಂದಿದ ವರ್ತಕರ ಗುಂಪೊಂದು ಸದ್ಯಕ್ಕೆ ಬಾಂಕಾಂಗಿಗೆ ಹೊರಟಿದ್ದು ಅಲ್ಲಿ ಜಪಾನಿನ ಪರ ಪ್ರಚಾರ ಮಾಡಲು ನಿಶ್ಚಯಿಸಲಾಗಿದೆ. ಸಯಾಮಿನಲ್ಲಿ ಜಪಾನಿನಿಂದ ಹಣಕಾಸಿನ ಸಹಾಯವನ್ನು ಪಡೆಯಬೇಕೆಂಬೂ ಅದಕ್ಕೆ ಬದಲು ಸಯಾಮಿ ಸರಕಾರವು ತಬ್ಬರ್ ಮತ್ತು ತವರ ಪ ಸವಲತ್ತುಗಳನ್ನು ಒವಾನಕ್ಕೆ ಕೊಡಬೇಕೆಂದೂ ಅದರ ನಾಯಕರು ಅಭಿಪ್ರಾಯಪಡುತ್ತಾರೆ.

—೦೦೦—

ಕೃತಕ ಇಬ್ಬನಿ (ಮಂಜು).

ಈಗ್ಗೆ ಕೆಲವು ದಿನಗಳ ಹಿಂದೆ ರಷ್ಯಾದಲ್ಲಿ ಹತ್ತಾರು ಏರೋಪ್ಲೇನುಗಳು ಹೊರಟು ತಮ್ಮ ದೇಶದಲ್ಲಿ ಹೇರಳವಾಗಿ ಬೆಳೆಯುವ ಗಜ ನಿಂಬೆ ಹಣ್ಣಿನ ಬೆಳೆಯನ್ನು ರಕ್ಷಿಸಲು ರಸಾಯನ ರೀತಿಯಲ್ಲಿ ಕೃತಕ ಇಬ್ಬನಿಯನ್ನು ತಯಾರುಮಾಡುತ್ತಿವೆ. ಈ ಇಬ್ಬನಿಯು ವಾತಾವರಣದಲ್ಲಿನ ಆಕ್ಸಿಜನ್‌ನಿಂದ ಆ ಬೆಳೆಯನ್ನು ರಕ್ಷಿಸುತ್ತದಂತೆ.

ಈಗ ಇಲ್ಲಿನವರೆಗೆ ಈ ಪರೀಕ್ಷೆಯು ಸಫಲವಾದಲ್ಲಿ ಸೋವಿಯಟ್ ಸರಕಾರದವರು ಇದೇ ರೀತಿಯಲ್ಲಿ ತಮ್ಮ ದೇಶದಲ್ಲಿ ಹತ್ತಿಯ ಬೆಳೆಯನ್ನು ಬೆಳೆಯಲು ಕೃತಕ ಇಬ್ಬನಿಯ ಪ್ರಯೋಗ ನಡೆಸುವವರಾಗಿದ್ದಾರೆಂದು ತಿಳಿದು ಬಂದಿದೆ.

—೦೦೦—

ಸಾಲಗೆಯಲ್ಲಿ ಅದ್ಭುತ ಗುಣವಿದೆ.

ಲಾಸ್ ಎಂಜಲ್ಸ್ ಎಂಬಲ್ಲಿನ ದೊಡ್ಡ ಸೋಪಿನ ಕಾರ್ಖಾನೆಯಲ್ಲಿ ತಯಾರಾದ ಸಾಬೂನಿನ ಶುದ್ಧತೆಯನ್ನು ಪರೀಕ್ಷೆ ಮಾಡುವುದು ರಸಾಯನಿಕ ರೀತಿಯಿಂದಲ್ಲ: ಜೋಸೆಫ್ ಸೊಯ್ರೇಲ್ ಎಂಬ ಅಧಿಕಾರಿಯು ನಾಲಿಗೆಯಿಂದ ಸಾಬೂನಿನ ಸಾಮ್ಯಂಪಲ್ಲುಗಳನ್ನೆಲ್ಲ ರುಚಿನೋಡಿ ಪರೀಕ್ಷಿಸಿದ ಮೇಲೆಯೇ ಅವನ್ನು ಮಾರಾಟಕ್ಕೆ ಕಳುಹಿಸುವನು. ರಸಾಯನಿಕ ಪದ್ಧತಿಗಳು ಕೂಡ ಅವನ ನಾಲಿಗೆಯಷ್ಟು ಸೂಕ್ಷ್ಮವಾಗಿಲ್ಲವಂತೆ.

ಇದೇ ರೀತಿಯಲ್ಲಿ ವ್ಯವಸಾಯ ಮತ್ತು ವಿಜ್ಞಾನ ಶಾಖೆಗಳ ಮಂತ್ರಿಗಳು ಒಬ್ಬ ಮನುಷ್ಯನನ್ನು ಸಮುದ್ರ ನೀರನ್ನು ಪರೀಕ್ಷಿಸುವುದಕ್ಕಾಗಿ ನಿಯಮಿಸಿದ್ದಾರೆ. ಯಾವ ಸಮುದ್ರ ನೀರು ಅವನಿಗೆ ತಿಳಿದು ಕೊಡಲು ಅದನ್ನು ರುಚಿ-ನೋಡಿ ಅದರಲ್ಲಿ ಯಾವ ವಿಷವು ಹೆಚ್ಚಾಗಿ ಸಿಕ್ಕುತ್ತದೆ ಆ ಕ್ಷಣದಲ್ಲಿ ಹೇಳಬಲ್ಲನಂತೆ ಇವನ ಪರೀಕ್ಷೆಗಳಿಂದ ವಿಜ್ಞಾನ ಶಾಖೆಗೆ ಲಕ್ಷಾಂತರ ಡಾಲರುಗಳು ಉಳಿತಾಯವಾಗುತ್ತಿದೆಯಂತೆ.

—೦೦೦—

ಪೆಟ್ರೋಲಿಗೆ ಬದಲು ಇದ್ದಿಲುಗಾಳಿ ಫ್ರಾನ್ಸ್‌ನಲ್ಲಿನ ನೂತನ ಶೋಧೆ.

ಫ್ರಾನ್ಸ್‌ನಲ್ಲಿ ಅತಿ ಜಾಗ್ರತೆಯಾಗಿ ಓಡುವ ರೈಲುಗಾಡಿಯ ಎಂಜಿನ್ನುಗಳಿಗೆ ಪೆಟ್ರೋಲಿನ ಅಭಾವದಲ್ಲಿ ಈ ರೈಲುಗಳು ಉಪಯೋಗವಿಲ್ಲದಾಗುತ್ತದೆಂದು ತಿಳಿದು ಫ್ರೆಂಚ್ ಸರಕಾರದವರು ಶೋಧನೆಗಳನ್ನು ನಡೆಸುತ್ತ ಈಗ ಇದ್ದಿಲಿನಿಂದ ತಯಾರು ಮಾಡಿದ ಗಾಳಿಯನ್ನು ಪೆಟ್ರೋಲಿನ ಬದಲಿಗೆ ಉಪಯೋಗಿಸುತ್ತಿದ್ದಾರೆ. ಈ ಹೊಸ ಇದ್ದಿಲು ಗಾಳಿಯು ಪೆಟ್ರೋಲಿಗಿಂತ ಎಷ್ಟೋ ಲಗ್ಗಂತೆ. ಅಂದತ್ತು ಮೈಲಿ ದೂರ ಇಂಜನು ಓಡಿದರೆ ಒಂದು ಪೌಂಡು ಪೆನ್ನು ಮೂತ್ರ ವಿಚಾರಿಸುವುದೆಂದೂ ಪ್ರದರ್ಶನದಿಂದ ತೋರಿಸಿದ್ದಾರೆ.

ಫ್ರಾನ್ಸ್‌ನಲ್ಲಿರುವ ಭಾರಿ ಅರಣ್ಯಗಳು ಎಂದಿಗೂ ಕಡಿಮೆ ಬೀಳದಷ್ಟು ಇದ್ದಿಲನ್ನು ಒದಗಿಸಬಲ್ಲವಂತೆ.

—೦೦೦—

ಆಯೋಸವಾಗದಂತೆ ಔಷಧೋಪಚಾರ.

ಅಮೇರಿಕದ ಇಬ್ಬರು ವೈಜ್ಞಾನಿಕರು ಸೇರಿ ಈಗ ಒಂದು-ತರಹ ಸೀದಂ ತಪನನ್ನು ಕಂಡು ಹಿಡಿದಿರುವರು. ಈ ರಸವನ್ನು ಮನುಷ್ಯನ ರಕ್ತನಾಳಕ್ಕೆ ಪ್ರಯೋಗವಾಡಿದರೆ ಆತನು ದೀರ್ಘಕಾಲ ಕೆಲಸ ಮಾಡಲು ಶಕ್ತನಾಗುವನಂತೆ

ಈ ಶೋಧನೆಯನ್ನು ಪರೀಕ್ಷೆಮಾಡಲು ಗಾಣಗಳನ್ನು ಎಳೆಯುತ್ತಿದ್ದ ನಾಯಿಗಳಿಗೆ ಈ ರಸವನ್ನು ಪ್ರಯೋಗವಾಡಲಾಯಿತು ಆ ನಾಯಿಗಳು 16 ಗಂಟೆ ಕಾಲ ಸ್ವಲ್ಪವೂ ದಣಿಯದೆ ಗಾಣಗಳನ್ನು ಎಳೆಯುತ್ತಿದ್ದುವೆಂದು ಹೇಳಲಾಗಿದೆ

ಈ ಪರಿಶೋಧನೆಯಿಂದ ಈ ವೈಜ್ಞಾನಿಕರು ಮನುಷ್ಯರಿಗೆ ಇದನ್ನು ಉಪಯೋಗಿಸಿದಲ್ಲಿ ತಮಗಿರತಕ್ಕ ಆ ಪುಸ್ತಿಗೆ ಇನ್ನೂ ಹಕ್ಕು ವರ್ಷಗಳು ಕಾಯಿಡಿ ಬರುವುದೆಂದು ಹೇಳುತ್ತಾರೆ ಆದರೆ ಆ ನಾಯಿಗಳಂತೆ ಜೀವವಿಲ್ಲದವನನ್ನು ಹೆಚ್ಚಿಸಿಕೊಂಡು ದುಡಿಯುವದರಿಂದ ಪ್ರಯೋಜನವೇನೆಂಬುದು ಗೊತ್ತಾಗಲಿಲ್ಲ.

—೦೦೦—

ಗಂಡ ಹೆಂಡಿರ ಕಲಹವನ್ನು ತೀರ್ಮಾನ ಮಾಡುವ ಕೋರ್ಟು.

ಲಂಡನ್ನಿನಲ್ಲಿ ರಾತ್ರಿಂದಿನ ಜಗಳಾಡಿ ತಮ್ಮ ಜೀವನವನ್ನು ನಿಸ್ಸಾರವಾಗಿ ಮಾಡುತ್ತಿರುವ ದಂಪತಿಗಳಿಗೆ ಸುಖವನ್ನೀಯಲು ಈ ಕೋರ್ಟಿನ ಏರ್ಪಾಡಾಗುತ್ತಿರುವುದು. ಲಂಡನ್ನಿನಲ್ಲಿ ಇಂದಿಗಿಂದಾಗಿ ಮನಸ್ತಾಪಗಳಾದ ಗಯ್ಯಾಳಿಗಳ ಹೀನ ವರ್ತನೆಗಳಿಗೆ ಲಕ್ಕೆಕೊಡವಂತಾಗಿದೆ. ಯಾಕೆಂದರೆ ಗಂಡ ಹೆಂಡರಲ್ಲಿ ಜಗಳವಾಗಿ ಇಲ್ಲವೆ ಗಂಡನು ಹೆಂಡತಿಯನ್ನು ತ್ಯಜಿಸಿರುವುದು ಅಥವಾ ಹೆಂಡತಿಯು ಗಂಡನನ್ನು ತ್ಯಜಿಸಿ ಪುಂಡರೆ ಕೂಡಲೇ ನೆರೆಕರೆಯವರು ತಮ್ಮ ಬಾಯಿಗೆ ಕೆಲಸ ಕೊಡಲು ಪ್ರಾರಂಭಿಸುವದಲ್ಲದೆ, ಜಗಳವಾಡಿದ ಗಂಡುಮಿಂಡನ್ನು ಸಮಾಜದಲ್ಲಿ ಮುಖವೆತ್ತದಂತೆ ನಿಂದಿಸಲೂ ಹೇಸುವುದಿಲ್ಲ. ಇದಕ್ಕಾಗಿ ಈ ಕೋರ್ಟಿನಲ್ಲಿ ಯಾವ ಜಗಳವನ್ನು ತೀರ್ಮಾನಿಸುವಾಗ ಅವಕ್ಕೆ ಸಂಬಂಧಪಟ್ಟವರನ್ನು ವಾತ್ರ ಒಳಗೆ ಹೋಗಲು ಬಿಡುವರಲ್ಲದೆ, ಬೇರೆಯವರಿಗೆ ಪ್ರವೇಶವಿಲ್ಲ. ಈ ಕೋರ್ಟಿನಲ್ಲಿ ಮೂವರು ನ್ಯಾಯಧೀಶರು. ಅವರಲ್ಲೊಬ್ಬಳು ಹೆಂಗಸು.

—೦೦೦—

ತನ್ನ ಚಿತೆಗೆ ತಾನೇ ಬೆಂಕಿಕೊಟ್ಟನು.

ಭೀಮೂವಡಮಿನ ಪಾಲಕೋಲ ಎಂಬಲ್ಲಿಂದ ವೈಶ್ಯಜಾತಿಯ ಯುವಕನೋರ್ವನು ಶ್ರೀರಾಮನ ಧ್ಯಾನದಲ್ಲಿ ಲೀನನಾಗಿ ತನ್ನ ದೇಹವನ್ನು ಶ್ರೀರಾಮನ ಪಟದ ಎಳುರಿಗೆ ಬೆಂಕಿಗೆ ಆಹುತಿಯಾಗಿ ಕೊಟ್ಟನು. ಶ್ರೀರಾಮನ ಪಟವನ್ನು ಗೋಡೆಗೆ ತೂಗುಹಾಕಿ ಅವನಿದಿರಿನಲ್ಲಿ ಚಿತೆಗೆ ಬೆಂಕಿಯನ್ನು ತಾನೇ ಹೊತ್ತಿಸಿ, ಅದು ಜೋರಾಗಿ ಉರಿದೊಡನೆ ಸೈಗೆ ಪೆಟ್ರೋಲ್ ಎಣ್ಣೆ ಸುರಿಬೆಂಕಿಯಲ್ಲಿ ಹಾರಿಬಿದ್ದನು. ಸುತ್ತಮುತ್ತಲಿನವರು ಇವನ ಈ ಹುಚ್ಚುತನವನ್ನು ನೋಡಿತಡೆಯಲು ಬಂದು ಬೆಂಕಿಯನ್ನು ನಂದಿಸುವಷ್ಟರಲ್ಲಿ ಅವನ ಪ್ರಾಣ ಹೋಗಿತ್ತು.

ಹಿಂದೀ ಸರ್ಕಾರದ ಉಚ್ಚ ಪದವಿಗಳು.

ಹಿಂದೀ ಸರ್ಕಾರದ ಉಚ್ಚ ಪದವಿಗಳಲ್ಲಿ ಕೆಳಗೆ ಕೊಟ್ಟಂತೆ ಯೂರೋಪಿಯನ್ ಮತ್ತು ಹಿಂದೀ ಅಧಿಕಾರಿಗಳಿರುವರೆಂದು ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಸೂಚಿಸಲಾಗಿದೆ.

ಪದವಿ	ಯೂರೋಪಿಯನರು	ಹಿಂದೀಯರು
ಐ. ಸಿ. ಯಸ್.	756	344
ಇಂಡಿಯನ್ ಪೊಲೀಸ್	495	170
ಕೃಷಿ ಇಲಾಖೆ	39	28
ವಿದ್ಯಾ ಇಲಾಖೆ (ಗಂಡಸರು)	69	64
,, ,, (ಹೆಂಗಸರು)	11	3
ಫಾರೆಸ್ಟ್ ಇಲಾಖೆ	183	89
ಸಿವಿಲ್ ಮೆಡಿಕಲ್ ಇಲಾಖೆ	205	100
ಇಂಜಿನೀಯರರು	268	273
ಪಶು ವೈದ್ಯ	16	1
ಜುಮ್ಲ	2047	1072

ಶೇಕಡ ಹಿಂದೀ ಅಧಿಕಾರಿಗಳು 34-4.

—೦೦೦—

ದ ಕ. ಕ್ರೈಸ್ತ ಸಮ್ಮೇಳನ.

ದ ಕ. ಕ್ರೈಸ್ತ ಸಮ್ಮೇಳನದ ಪ್ರಥಮ ಅಧಿವೇಶನವು ಏಪ್ರಿಲ್ ತಾ. 13ನೇ ಸೋಮವಾರ ಮದ್ರಾಸಿನಲ್ಲಿ ಜರಗಿತು. ಅಧ್ಯಕ್ಷರು ಮಿ. ದಿವಾನ್ ಬಹದ್ದೂರ್ ಎಸ್ ಇ. ರಂಗನಾಥಮುದಲಿಯಾರವರು ಸಾಧಾರಣ 80 ಮಂದಿ ಪ್ರತಿನಿಧಿಗಳು ಹಾಜರಿದ್ದರು

ದಿವಂಗತ ಜಕ್ಕರಯ್ ಗಳವರ ತತ್ವಕ್ಕೆ ಚಿರಶಾಂತಿಯನ್ನು ಬಯಸಿ ಸಮ್ಮೇಳನವು ಕಾರ್ಯ ಪ್ರಾರಂಭಿಸಿತು. ಕ್ರೈಸ್ತರು ಇಷ್ಟರ ವರೆಗೆ ನಡೆಸಿದ ಸ್ವರಾಜ್ಯ ಆರಾಧನೆಯಲ್ಲಿ ಭಗವಂತನ ಸಮೀಪ ಇದ್ದುದು ಶುದ್ಧ ಅವಶ್ಯಕವೆನಿಸಿದರೂ ಇನ್ನು ಮುಂದೆ ಜಾತೀಯತೆಯ ಭೇದವನ್ನೆಣಿಸದೆ ಹಿಂದೂಸ್ಥಾನದ ಪ್ರಜೆಗಳು ನಾವೂ ಆಗಿರುವೆವು ಎಂದು ಎಣಿಸಿ ಡೊಮಿನಿಯನ್ ಸ್ಟೇಟಸ್‌ಗಾಗಿ ನಾವು ಕಾದಾಡಬೇಕೆಂದೂ ಹಿಂದೂಸ್ಥಾನದ ಒಡತನವನ್ನು ಹೇಗಲಾದರೂ ನಮ್ಮದಾಗಿಸಿಕೊಳ್ಳುವಷ್ಟು ಮಟ್ಟಿಗೆ ಪ್ರಯತ್ನಿಸಬೇಕೆಂದೂ. ಇದಕ್ಕಾಗಿ ಸಮಸ್ತ ಕ್ರೈಸ್ತ ಬಂಧುಗಳ ಸಹಾಯವನ್ನೂ ಒಡನಾಡಿಕೆಯನ್ನೂ ಈ ಸಮ್ಮೇಳನವು ಕೋರಬೇಕೆಂದೂ. ಹಿಂದೂದೇಶದ ನವಶಕ್ತಿಯ ಪ್ರಕಾರ ಅಧಿಕಾರ ಸ್ವೀಕಾರವನ್ನು ಪಡೆದು ದೇಶಹಿತವನ್ನು ಸಾಧಿಸುವ ಪಂಥವನ್ನು ಹಿಡಿಯುವುದೇ ಕಾರ್ಯವೆಂದೂ ತಾವುಗಳನ್ನು ಮುಂಜೂರು ಮಾಡಿದ ನಿರ್ಣಯ ಸಫಲತ್ಯವಾಯಿತು.

—೦೦೦—

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನೀನನ್ನು ಯಾವ ರೂಪದಲ್ಲಿಯೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನೀನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಧೆಯಿಲ್ಲದೆ ಹಾನಿಕರವಾಗದ ಸುಜೀರ್ಣ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರ್. 68, ಕೊಚಿನ್.

ಸ್ಟಾಕಿಸ್ಟ್—ಎ ಎಸ್. ಮೂಚಯ್ಯ, ಒಟ್ಟೆ ವ್ಯಾಪಾರಿ, ಸಂಟಿಕೊಪ್ಪ. 52—46
ಏಜೆಂಟ್—ವಿ. ಬಿ ಕಾಮತ್, ಮಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ,

ಪ. ಜವ್ಹಾರಿಲಾಲರ ಭಾಷಣ.

ಪಂಡಿತ ಜವಾಹಿರಲಾಲರ ಅಧ್ಯಕ್ಷ ಭಾಷಣದ ವಿಸ್ತೃತವಾದ ಭಾಷಾಂತರವನ್ನು ಇಲ್ಲಿ ಕೊಡಲ್ಪಟ್ಟಿರುವುದು ಕಳೆದ ವಾರ ಬಹು ಸಂಕ್ಷಿಪ್ತ ಸಾರಾಂಶ ಕೊಡಲಾಗಿತ್ತು.

ಬಂಧುಗಳೇ.

ಅನೇಕ ವರ್ಷಗಳ ನಂತರ ಈ ಅಧ್ಯಕ್ಷಸ್ಥಾನದಿಂದ ನಿಮ್ಮನ್ನು ಭೇಟಿ ಮಾಡುವ ಅವಕಾಶವು ನನಗೆ ಉಂಟಾಗಿದೆ ಈ ಪಧ್ಯೆ ನಾವೆಲ್ಲರೂ ಬಹುವಾಗಿ ಹೊಡೆದಾಡಿ ಹಣ್ಣಾದಿದ್ದೇವೆ. ಸಮವಾಗಿ ದುಃಖವನ್ನು ಅನುಭವಿಸಿದ್ದೇವೆ. ನಾವು ಪುನಃ ಸೇರುವುದು ನಮಗೆಲ್ಲರಿಗೂ ಒಳ್ಳೆಯದು. ನನಗಂತೂ ನನ್ನ ಹಳೆಯ ಒಡನಾಡಿಗಳ ಮತ್ತು ಮಿತ್ರರ ಈ ಮಹಾ ಸಮುದಾಯವನ್ನು ಸಂದರ್ಶಿಸುವುದು ಹಿತಕರವಾಗುತ್ತದೆ, ನಾವೆಲ್ಲರೂ ಅಖಂಡ ಸ್ನೇಹ ಬಂಧನದಿಂದ ಕಟ್ಟಲ್ಪಟ್ಟಿದ್ದೇನೆ. ನಿಮ್ಮ ದರ್ಶನ ಮಾಡಿದ ಮಾತ್ರದಿಂದಲೇ ಆ ಹಳೆಯ ವೀರ ಭಾವನೆಯು ಗೋಚರಕ್ಕೆ ಬರುತ್ತಿದೆ. ನೀವೆಲ್ಲರು ನನಗೆ ತೋರಿಸಿರುವ ಅಚ್ಚಳಿತವಾದ ದಯೆಯೂ ಸೌಹಾರ್ದವೂ ನನ್ನ ಭಾವನೆಗಳನ್ನು ಉದ್ದೀಪಿತಗೊಳಿಸಿವೆ. ಸ್ವಾತಂತ್ರ್ಯದ ಈ ಮಹಾ ಸಂಗ್ರಾಮದಲ್ಲಿ ನಾನು ನಿಮ್ಮೊಡನೆ ಒಡನಾಡಿಯಾಗಿ ಒಟ್ಟಿಗೆ ಪಾಲುಗಾರನಾಗಿ ಹೋರಾಡಿದ ಮಾತ್ರದಿಂದಲೇ ನೀವು ನನ್ನ ವಿಷಯದಲ್ಲಿ ತೋರಿಸುವ ಸದ್ಭಾವನೆಯು ಅನಾಶ್ಚರ್ಯವಾಗಿದೆ. ಆ ನಿಮ್ಮ ಭಾವನೆಯೆ ನನಗೆ ಧೈರ್ಯ ಕೊಟ್ಟಿದೆ. ನನಗೆ ಬಲವುಂಟುಮಾಡಿದೆ. ಈ ಮಹಾ ಸಭೆಯಲ್ಲಿಯೂ ಕೂಡಾ ನನಗೆ ಒಂದು ರೀತಿಯಾದ ಅಗಲಿಕೆಯೂ ನನಸ್ಸಿಗೆ ಉಂಟಾಗುತ್ತಿದೆ ಅನೇಕ ಪ್ರಿಯ ಒಡನಾಡಿಗಳೂ ಸ್ನೇಹಿತರೂ ನಮ್ಮೊಡನೆ ದೇಶಕ್ಕಾಗಿ ಕಾದಾಡಿ ಹೊಡೆದಾಡಿ ನಮ್ಮನ್ನು ಬಿಟ್ಟುಹೋದರು. ಆ ಹೊಡೆದಾಟದ ವೇಗವು ಅವರ ಆಯುಷ್ಯನ್ನು ಕುಂದಿಸಿ ಅವರ ಇಹಲೋಕ ಪ್ರಯಾಣವನ್ನು ಬೇಗನೇ ಮುಗಿಸಿತು ಒಬ್ಬೊಬ್ಬರಾಗಿ ಅವರು ತೀಳುತ್ತಿದ್ದಾರೆ. ನಮ್ಮ ಹೃದಯದಲ್ಲಿ ಶೂನ್ಯತೆಯುಂಟುಮಾಡಿ ನಮ್ಮ ಮನಸ್ಸಿನಲ್ಲಿ ದುಃಖವನ್ನು ಕುಂಬಿದೂರವಾಗುತ್ತಿದ್ದಾರೆ ಒಹುಶಃ ಈ ಹೊಡೆದಾಟದಿಂದ ವಿಶ್ರಾಂತಿ ಶಾಂತಿಯನ್ನು ಅವರು ಪಡೆಯಬಹುದು. ಹಾಗಿದ್ದರೆ ಅವರು ಅದಕ್ಕೆ ಅರ್ಹರು. ತಮ್ಮ ಶ್ರಮವನ್ನು ಮುಗಿಸಿ ಅವರು ವಿಶ್ರಾಂತಿ ಹೊಂದುತ್ತಿರುವರು.

ವಿಶ್ರಾಂತಿಯೆಂದರೆ ದ್ರೋಹ.

ಆದರೆ ಉಳಿದಿರುವ ನಮ್ಮ ಪಾಡೇನು? ನಮ್ಮ ಮೇಲೆ ಭಾರಿ ಜವಾಬ್ದಾರಿಯೂ, ಕರ್ತವ್ಯದ ಭಾರವೂ ಬಿದ್ದಿರುವುದಲ್ಲವೆ? ನಮಗೆ ವಿಶ್ರಾಂತಿಯಿಲ್ಲ. ಜೈಲುಗಳಲ್ಲಿ ಕೂಳೆಯುವ ಮತ್ತು ಡಿಟೆನ್‌ಷನ್ ಕ್ಯಾಂಪುಗಳಲ್ಲಿ ಕ್ರಮಕ್ರಮವಾಗಿ ಅಳೆಯುತ್ತಿರುವ ಆ ನಮ್ಮ ಒಡನಾಡಿಗಳಿಗೆ ಶಾಂತಿಯೆಲ್ಲಿಂದ ಬರಬೇಕು? ನಾವು ವಿಶ್ರಾಂತಿಗೊಳ್ಳಲಾರೆವು. ನಾವು ವಿಶ್ರಾಂತಿಯಲ್ಲಿ ತೊಡಗುವುದು ದ್ರೋಹ. ನಮ್ಮನ್ನು ಯಾರು ಇಲ್ಲಿ ಬಿಟ್ಟುಹೋಗಿರುವರೋ, ಯಾರು ನಮಗೆ ಸ್ವಾತಂತ್ರ್ಯದ ದೀಎಟಿಗೆಯನ್ನು ಕೊಟ್ಟು ಅದನ್ನು ಯಾವಾಗಲೂ ಉರಿಯುತ್ತಿರುವಂತೆ ಇಡಹೇಳಿಹೋದರೋ ಅವರಿಗೆ, ನಾವು ವಿಶ್ರಾಂತಿ ಸಿದ್ದಾಡರೆ, ದ್ರೋಹಮಾಡಿದಂತಾಗುವದು.

ನಾನು ಆಯಾಸ ಹೊಂದಿದ್ದೇನೆ. ಆಯಾಸ ಹೊಂದಿದ ಮಗುವಿನಂತೆ ಸ್ವಲ್ಪ ಸುಖಶಾಂತಿಗಾಗಿ ನಮ್ಮೆಲ್ಲರಿಗೂ ಸಮಾನವಾದ ತಾಯಿಯೂದ ಭಾರತ ಮಾತೆಯ ತೊಡೆಯ ಮೇಲೆ ಬಂದಿದ್ದೇನೆ. ನನಗೆ ಸ್ವಲ್ಪ ಸುಖಶಾಂತಿಯೂ ಲಭಿಸಿತು ಆ ಸಾರವಾಗಿ ಲಭಿಸಿತು. ಸಾವಿರಾರು ಕೈಗಳೂ ನನ್ನ ಕಡೆ ಚಾಚಿ ಪ್ರೀತಿಯಿಂದ ಕರೆದವು. ಅನಾನವಾದ ಲಕ್ಷೋಪಲಕ್ಷ ಪ್ರಜೆಗಳ ಸಹಾನುಭೂತಿಯು ನನ್ನ ಹೃದಯಕ್ಕೆ ಅವರ ವಾತ್ಸಲ್ಯಸಂದೇಶವನ್ನು ಮುಟ್ಟಿಸಿದೆ.

ಸೋಲಿನಿಂದ ಕುಗ್ಗಬಾರದು.

ಹಿಂದಿನ ಘಟನೆಗಳನ್ನು ನಾವು ಮರ್ಲಕ್ಷಿಸುವ ಹಾಗಿಲ್ಲ. ಏಕೆಂದರೆ ಆ ಹಿಂದಿನದರಿಂದಲೂ ಈಗಿನದರಿಂದಲೂ ನಾವು ನಮ್ಮ ಭವಿಷ್ಯವನ್ನು ಕಟ್ಟಬೇಕು. ನಾವು ಉನ್ನತ ಆದರ್ಶಗಳನ್ನು ಅನುಸರಿಸಿದ್ದೇವೆ. ನಮ್ಮ ಸಾಧನಗಳೂ ಕೂಡ ಆ ಆದರ್ಶಗಳಿಗೆ ಅನುಗುಣವಾಗಿವೆಂದು ನಾವು ಹೆಮ್ಮೆಗೊಂಡಿದ್ದೇವೆ. ಈ ನಮ್ಮ ಪುರಾತನ ಮತ್ತು ಜೀರ್ಣ ದೇಶದಲ್ಲಿ ಅನೇಕ ಅದ್ಭುತ ಚಮತ್ಕಾರಗಳು ನಡೆದಿವೆ. ನಮ್ಮ ಜಯದೊಂದಿಗೇ ಸೋಲುಗಳೂ ಭ್ರಾಂತಿ ನಿವಾರಣೆಗಳೂ ಉಂಟಾಗಿವೆ. ಗುರಿಯು ಉನ್ನತವಾದುದಾಗಿ ಸಮಂವು ಒಹುಕಾಲ ನಡೆಯಬೇಕಾಗಿರುವ ಸ್ಥಿತಿಯಲ್ಲಿ ಹಂಗಾಮಿಯಾಗಿ ನೋವುಂಟಾಗಿದರೆ ಅವನ್ನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳಬಾರದು. ಮುಂದೆ ಇನ್ನೂ ಪ್ರಯತ್ನಮಾಡುವುದಕ್ಕೆ ಒಂದು ಉತ್ತೇಜನವನ್ನಾಗಿ ಭಾವಿಸಬೇಕು. ಸುಲಭವಾಗಿ ದೊರೆತ ವಿಜಯಕ್ಕಿಂತಲೂ ಸೋಲುಗಳ ನಂತರ ಒಂದ ವಿಜಯವು ಹೆಚ್ಚು ಮಹತ್ವವಾದುದು. ಸೋಲು ಒಂದಾಗ್ಯೆ ಅದಕ್ಕೆ ಕಾರಣವೇನೆಂಬುದನ್ನು ನಮ್ಮ ಮನಸ್ಸಿನಲ್ಲಿ ಶೋಧಿಸಬೇಕು. ಅದಿನ್ನು ನಿವಾರಿಸಿಕೊಳ್ಳಬೇಕು.



ಆತ್ಮ ಶೋಧನೆ ಬೇಕು.

ನಮ್ಮ ದೇಶದ ಈಗಿನ ವಿಷಮ ಸ್ಥಿತಿಯಲ್ಲಿ ನಾವು ನಮ್ಮ ಆತ್ಮ ಶೋಧನೆಯನ್ನು ಮಾಡಿಕೊಳ್ಳೋಣ. ನಾವು ಏನು ಮಾಡಿದ್ದೇವೆ? ಇತರರು ನನಗೆ ಏನು ಮಾಡಿದ್ದಾರೆ? ಇಂದು ನಾವು ಎಲ್ಲಿ ನಿಂತಿದ್ದೇವೆ? ಎಂಬುದನ್ನು ಶೋಧಿಸೋಣ ಈ ಶೋಧನೆಯಲ್ಲಿ ನಮ್ಮನ್ನು ನಾವು ಪಂಚಿಸಿಕೊಳ್ಳಬಾರದು ಆತ್ಮ ವಂಚನೆಯಿಂದ ಅರಾಜಕೇ ನಾಶವುಂಟಾಗುವುದು.

೧೬ ವರ್ಷಗಳ ಹಿಂದೆ.

೧೬ ವರ್ಷಗಳ ಹಿಂದೆ ನಮ್ಮ ಮುಖಂಡರು ಪ್ರೇರೇಪಣೆಯಂತೆ ನಾವು ಒಂದು ಕ್ರಮಸ ದೂರಗಾಮಿಯೂದ ಹೆಜ್ಜೆಯನ್ನು ಇಟ್ಟು ಕಾಂಗ್ರೆಸ್ಸನ್ನು ನಿಷ್ಕ್ರಿಯೋಗವಾದ ಸ್ಥಿತಿಯಿಂದ ಒಂದು ಬಲವತ್ತರವಾದ ಪ್ರಜಾಸಂಸ್ಥೆಯನ್ನಾಗಿ ಮಾಡಿದೆವು ಆಗ ಕಾಂಗ್ರೆಸ್ಸು ಉನ್ನತ ವರ್ಗದವರಲ್ಲಿ ದುರ್ಬಲವಾಗಿ ಕೆಲಸ ಮಾಡುತ್ತಿತ್ತು ಆಗ ನಾವು ಅದನ್ನು ಒಲವಾದ ಸಂಸ್ಥೆಯನ್ನಾಗಿ ಮಾಡಿ ಅದರ ಬೆನ್ನ ಹಿಂದೆ ಭಾರತೀಯ ಭೂಮಿಯ ಒಳಹೊಕ್ಕು ಅದರಲ್ಲಿ ವಾಸಿಸುವ ಪ್ರಜಾ ಸಮುದಾಯಗಳಿಗೆ ವ್ಯಾಪಿಸುವಂತೆ ಮಾಡಿದೆವು. ನಮ್ಮ ಕೆಲವು ಹಳೆಯ ಸ್ನೇಹಿತರಲ್ಲಿ ಕೆಲವರು ನಮ್ಮನ್ನು ಬಿಟ್ಟರು. ಅವರು ಆಗಿ ಹೋದ ಕಾಲಕ್ಕೂ ಪ್ರಜಾವರ್ಗಕ್ಕೂ ಸೇರಿದವರು. ಕಾಂಗ್ರೆಸ್ಸು ಪ್ರಜಾ ಪ್ರಭುತ್ವದ ದೊಡ್ಡ ಅಲೆಯನ್ನು ಪ್ರವೇಶಿಸಿದ ಕೂಡಲೇ ಅವರಿಗೆ ಭೀತಿಯುಂಟಾಯಿತು. ಆ ಸ್ನೇಹಿತರು ಕಾಂಗ್ರೆಸ್ಸನ್ನು ಬಿಟ್ಟು ಬ್ರಿಟಿಷ್ ಸಾಮ್ರಾಜ್ಯತ್ವದ ಶರಣಾಗತನ್ನೂ ಸಂರಕ್ಷಣೆಯನ್ನೂ ಹೊಕ್ಕರು. ಮತ್ತು ದೇಶದಲ್ಲಿ ಉದ್ಭವಿಸಿದ ನೂತನ ಶಕ್ತಿಗಳನ್ನು ಸಾಮ್ರಾಜ್ಯತ್ವವು ಎದುರಿಸಿದಾಗ ಅದಕ್ಕೆ ಬೆಂಬಲರಾದರು. ಮತ್ತು ಈ ನೂತನ ಶಕ್ತಿಗಳು ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದಾಗ ಸಾಮ್ರಾಜ್ಯವಾದಿಗಳೊಡನೆ ಕೈಜೋಡಿಸಿದರು. ಐತಿಹಾಸಿಕವಾಗಿ ಅವರು ಪರಾಜಿತರಾದರು. ಆದರೆ ನಾವು ದೇಶಸ್ವಾತಂತ್ರ್ಯ ಶಕ್ತಿಯನ್ನು ಅಡಗಿಸಲು ಹೊರಟ ನೂತನ ಡಬ್ಬಾಳಿಕೆಯ ಅಧಿಕಾರವನ್ನು ಎದುರಿಸಿ ಈಗಿನ ಇತಿಹಾಸದಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದೆವು ಪ್ರಜಾ ಸಮುದಾಯದ ನವಸೃಷ್ಟಿಯ ಉದಯವು ನಮಗೆ ಗೋಚರವಾಯಿತು. ಅನೇಕ ಶತಮಾನಗಳ ಪರಾಧೀನತೆಯ ಬಂಧನದಿಂದ ತೊಳಲುತ್ತಿದ್ದ ಪ್ರಜಾಸಮುದಾಯದ ಮನಸ್ಸು ಬಿಡುಗಡೆಯ ಭಾವನೆಯನ್ನು ಹೊಂದಿತು. ನಮ್ಮನ್ನು ಎಲ್ಲಾ ಕಡೆಯಿಂದಲೂ ಸುತ್ತುವರಿದಿದ್ದ ಮನೋದಾಸ್ಯದ ಶೃಂಖಲೆಗಳನ್ನು ಹರಿದೆವೆಂದು ನಾವು ಕೀರ್ತಿ ಪಡೆದೆವು ನಮ್ಮ ಮನಸ್ಸು ಬಿಡುಗಡೆ ಹೊಂದಿದ ಕೂಡಲೆ ರಾಜಕೀಯ ಸ್ವಾತಂತ್ರ್ಯವೂ ಕೂಡ ಬಹಳ ದೂರದಲ್ಲಿಲ್ಲವೆಂದು ಭಾವಿಸಿದೆವು. ಏಕೆಂದರೆ ಎಷ್ಟೋ ಸಾರಿ ಶರೀರದ ಬಂಧನಗಳನ್ನೂ ದೇಹವನ್ನು ಬಿಗಿದಿರುವ ಕಬ್ಬಿಣವನ್ನೂ ಮತ್ತು ಉಕ್ಕನ್ನೂ ಬಿಡಿಸುವದು ಸುಲಭ. ಆದರೆ ಮನಸ್ಸನ್ನು ಬಿಗಿದಿರುವ ಸಂಕಲ್ಪಗಳನ್ನು ಕತ್ತರಿಸುವದು ಕಷ್ಟ. ನಾವು ಯುಗ ಧರ್ಮವನ್ನು ಅರಿತು ಹೆಜ್ಜೆ ಹೆಜ್ಜೆಯಾಗಿ ಅಸಂಖ್ಯತವಾಗಿ ನಮ್ಮ ದೇಶದಲ್ಲಿಯೂ ಹೊಂಗಡಲಿಯೂ ಮುಂದ ಮುಂದೆ ಸಾರಿದವು. ಪ್ರಜಾ ಸಮುದಾಯಿದ ಧ್ವನಿಯೊಂದಿಗೆ ಧ್ವನಿ ಬೆರಸಿ ಸಂಘಟಿತ ಶಕ್ತಿಗಳೊಂದಿಗೆ ನಮ್ಮ ಶಕ್ತಿಯನ್ನು ಬೆಸೆದು ಒಂದು ಹೊಸ ರೀತಿಯ ಉತ್ಸಾಹವು ನಮ್ಮ ಆತ್ಮವನ್ನು ಪ್ರಚೋದಿಸಿತು. ನಾವು ನೂತನ ಐತಿಹಾಸಿಕ ಭಾಗ್ಯ ವಿಧಾತನ ಪ್ರತಿನಿಧಿಗಳೆಂಬ ಭಾವನೆಯು ನಮ್ಮ ಮನಸ್ಸಿನಲ್ಲಿ ಹಿಂದಾಡಿತು.

ಪ್ರಪಂಚದ ಸಮಸ್ಯೆ ಮತ್ತು ಭಾರತ ಸಮಸ್ಯೆಗಳ ಸಂಬಂಧ.

ಇಂಡಿಯಾವನ್ನು ಪ್ರಪಂಚದಿಂದ ಪ್ರತ್ಯೇಕಿಸಲಾರವು. ಅಥವಾ ಅಖಿಲ ಪ್ರಪಂಚದ ಸಮಸ್ಯೆಯಿಂದ ಬೇರೆ ಮಾಡಲಾರವು. ನಾವು ಭಾರತೀಯ ಸಮಸ್ಯೆಯನ್ನು ಅಖಿಲ ಪ್ರಪಂಚದ ಸಮಸ್ಯೆಯಿಂದ ಬೇರೆ ಮಾಡಿದರೆ ನಿಜವಾದ ಶಕ್ತಿಗಳನ್ನು ನಾವು ದುರ್ಲಕ್ಷಿಸಿದಂತಾಗುವುದು. ಘಟನೆಗಳನ್ನು ರೂಪುಗೊಳಿಸುವ ಶಕ್ತಿ ಸ್ವರೂಪಗಳು ನಮಗೆ ದೂರವಾಗುವವು, ಅಖಿಲ ಪ್ರಪಂಚವನ್ನು ವ್ಯಾಪಿಸಿರುವ ಜೀವಶಕ್ತಿಯಿಂದ ನಾವು ಬೇರೆ ಕಡಿದು ಹೋದಂತಾಗುವುದು. ನಾವು ಪ್ರಪಂಚದಿಂದಲೇ ಬೇರೆಯಾಗಿ ಕಡಿದುಕೊಂಡರೆ ನಮ್ಮ ಸ್ವಂತ ಸಮಸ್ಯೆಗಳ ಪ್ರಾಮುಖ್ಯತೆಯು ನಮಗೆ ಗೊತ್ತಾಗದು.

ಮಹಾಯುದ್ಧದಿಂದೀಚಿನ ಬಂಡವಾಳ ಪದ್ಧತಿ.

ಮಹಾಯುದ್ಧದ ನಂತರ ಯುರೋಪ್ ಮತ್ತು ಏಷ್ಯಾದಲ್ಲಿ ಕ್ರಾಂತಿಕಾರಕವಾದ ಪರಿವರ್ತನೆಗಳಾದವು. ಯುರೋಪಿನಲ್ಲಿ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹೋರಾಟವು ತೀಕ್ಷ್ಣವಾಯಿತು. ಏಷ್ಯಾದ ಜನಾಂಗಗಳಲ್ಲಿ ಅಕ್ರಮವಾದ ಪರಕೀಯ ರಾಷ್ಟ್ರಪ್ರಭುತ್ವವನ್ನು ಪ್ರಜ್ವಲಿಸಿತು. ಜಯಪರಾಜಯಗಳೂ ಉಂಟಾದವು. ಒಂದೊಂದಾವರ್ತಿ ಕ್ರಾಂತಿಯ ಶಕ್ತಿಗಳು ಉಡುಗಿ ಹೋಗಿ ಸ್ಥಿಮಿತ ಸ್ಥಿತಿಯು ಬಂದಂತೆ ಕಂಡು ಬರುತ್ತಿತ್ತು. ಆದರೆ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳ ಈ ಸ್ಥಿಮಿತಕ್ಕೆ ಅವಕಾಶವೇಯಲಿಲ್ಲ. ಹಾಲಿ ಇದ್ದ ಸಾಮಾಜಿಕ ರಚನೆಯು ಹೊಸ ಪರಿಸ್ಥಿತಿಗಳನ್ನು ಹೊಂದಿಸಿಕೊಳ್ಳಲಾರದೆ ಹೋಯಿತು. ಈ ಹೊಂದಾವಣೆಯ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ಎಲ್ಲೆಲ್ಲಿಯೂ ಹೋರಾಟಗಳು ಪ್ರಬಲಿಸಿದುವು. ಅಖಿಲ ಪ್ರಪಂಚವನ್ನು ಒಂದು ದೊಡ್ಡ ಮುಗ್ಗಟ್ಟು ಆವರಿಸಿತು. ಪ್ರಪಂಚದ ಸ್ಥಿತಿಯು ಕ್ರಮ ಕ್ರಮವಾಗಿ ಕೆಡುತ್ತಾ ಬಂದಿತು. ಸೋವಿಯಟ್ ರಷ್ಯಾ ಹೊರತಾಗಿ ಪ್ರಪಂಚದ ಉಳಿದ ಭಾಗಗಳಲ್ಲೆಲ್ಲಾ ಸ್ಥಿತಿಗತಿಗಳು ಕೆಡುತ್ತಾ ಬಂದವು. ಸೋವಿಯಟ್ ರಷ್ಯಾದಲ್ಲಿ ಮಾತ್ರ ಸರ್ವರಿಗೂ ವಿಸ್ಮಯದಾಯಕವಾದ ಸಾರ್ವತ್ರಿಕ ಪ್ರಗತಿಯುಂಟಾಯಿತು, ಪ್ರಪಂಚದಲ್ಲಿ ಎರಡು ಪ್ರತಿಸ್ಪರ್ಧಿಯಾದ ಆರ್ಥಿಕ ಮತ್ತು ರಾಜಕೀಯ ಪದ್ಧತಿಗಳು ಪರಸ್ಪರ ಹೋರಾಟಕ್ಕೆ ನಿಂತವು. ಇವೆರಡರ ಹೋರಾಟವು ಸ್ವಲ್ಪ ಶಮನವಾಗಿ ಸ್ಥಿಮಿತಕ್ಕೆ ಒಂದು ಹಾಗೆ ಕಂಡರೂ ಅವುಗಳ ದ್ವೇಷವು ಪುಟಿದು ವ್ಯಾಪಿಸಿ ಪ್ರಪಂಚದ ರಂಗದಲ್ಲಿ ಯಾವುದು ಮೇಲಾಗಬೇಕೆಂದು ಹೋರಾಟಗಳು ಆಗುತ್ತಿದ್ದವು. ಈ ಎರಡು ಪದ್ಧತಿಗಳಲ್ಲಿ ಒಂದು ಬಂಡವಾಳ ವ್ಯವಸ್ಥೆಯದು. ಇದು ಅಪರಿಹಾರ್ಯವಾಗಿ ವಿಶಾಲವಾದ ಸಾಮ್ರಾಜ್ಯಗಳ ಅಡಿಪಾಯದ ಮೇಲೆ ನಿಂತಿತು. ಈ ಬಂಡವಾಳ ಪದ್ಧತಿಯು ಕಾಲೋನಿಯಲ್ ಪ್ರಪಂಚವನ್ನು ನುಂಗಿತು. ಇಷ್ಟೇ ಅಲ್ಲದೆ ಬಂಡವಾಳ ಪದ್ಧತಿಯ ಪರಿಣಾಮವಾಗಿ ಹುಟ್ಟಿದ ಸಾಮ್ರಾಜ್ಯಗಳು ಒಂದನ್ನೊಂದು ನುಂಗಲಾರಂಭಿಸಿದವು. ಆದಾಗ್ಯೂ ಇವುಗಳ ಬಲವು ಕಡಿಮೆಯಾಗಲಿಲ್ಲ. ಇವುಗಳಿಗೆ ಯುದ್ಧದ ಭೀತಿ ಬೇರೆ. ಯುದ್ಧದಿಂದ ತಮ್ಮ ಆಧಿಪತ್ಯಗಳು ಎಲ್ಲಿ ಕಳೆದು ಹೋಗುವೊ ಎಂಬ ಕಳವಳ. ಆದರೂ ಪರಸ್ಪರ ಹೋರಾಟವು ತಪ್ಪಲಿಲ್ಲ. ಯಾವಾಗಲೂ ಯುದ್ಧಕ್ಕೆ ಸಿದ್ಧವಾಗಿ ಯುದ್ಧಜ್ವರ ಪೀಡಿತವಾಗಿದೆ. ಈ ಸಾಮ್ರಾಜ್ಯ ರಾಷ್ಟ್ರಗಳಲ್ಲಿ ಉದ್ಭವಿಸಿದ ಅನೇಕ ಸಮಸ್ಯೆಗಳು ಪರಿಹಾರ ಹೊಂದದೆ ಅವುಗಳ ನಾಶಕ್ಕೆ ಕಾರಣವಾಗಿವೆ. ಸ್ವಲ್ಪ ಸ್ವಲ್ಪವಾಗಿ ಸಾಮ್ರಾಜ್ಯದ ಬೇರುಗಳು ಕುಸಿಯುತ್ತ ಬಂದಿವೆ. ಇನ್ನೊಂದು ಪದ್ಧತಿಯು ಹೊಸ ಸಾಮಾಜಿಕ ಪದ್ಧತಿ. ಸಮಷ್ಠಿ ಪದ್ಧತಿ. ಸೋವಿಯಟ್ ರಷ್ಯಾದ ಸೋಷಿಯಲಿಸ್ಟ್ ಪದ್ಧತಿಯು ಅಭಿವೃದ್ಧಿಯಿಂದ ಪ್ರಗತಿಗೆ ಏರುತ್ತಿದೆ. ಈ ಪ್ರಗತಿಯು ಅಷ್ಟು ಸುಲಭವಾಗಿ ಬಂದುದಲ್ಲ ಆದಾಗ್ಯೂ ಸೋವಿಯಟ್ ರಷ್ಯಾದಲ್ಲಿ ಬಂಡವಾಳ ಪ್ರಧಾನ ದೇಶಗಳಲ್ಲಿರುವ ಸಮಸ್ಯೆಗಳಿಲ್ಲ.

ಬಂಡವಾಳಗಾರಿಕೆಯ ಎರಡು ರೂಪುಗಳು.

ಕ್ಯಾಪಿಟಲಿಸಂ (ಧನಿಕತ್ವ) ಪದ್ಧತಿಯು ತನ್ನ ಕಷ್ಟಗಳಲ್ಲಿ ಫ್ಯಾಸಿಸಂ ಆಗಿ ತಿರುಗಿತು. ಈ ಫ್ಯಾಸಿಸಂ ಪದ್ಧತಿಯು ಪಶ್ಚಿಮ ಸಭ್ಯತೆಗೆ ಮೂಸ್ಯವಾಗಿದ್ದ ಎಲ್ಲಾ ಸ್ವಾತಂತ್ರ್ಯಗಳನ್ನೂ ಮೃಗದಂತೆ ಹರಣಮಾಡುತ್ತಿದೆ. ಸಾಮ್ರಾಜ್ಯವಾದಿ ರಾಷ್ಟ್ರಗಳು ತಮ್ಮ ಅಧೀನದಲ್ಲಿದ್ದ ಕೊಲೋನಿಯಲ್ ಜನಾಂಗಗಳಲ್ಲಿ ಪ್ರಜೆಗಳ ಮೇಲೆ ಯಾವ ಯಾವ ಅತ್ಯಾಚಾರ ನಡೆಸಿತೋ ಅವೆಲ್ಲವನ್ನೂ ಫ್ಯಾಸಿಸಂ ಪದ್ಧತಿಯು ತನ್ನ ಸ್ವಂತ ದೇಶದಲ್ಲಿಯೇ ನಡೆಸುತ್ತದೆ. ಈಗ ಮೈತಿ ಹೊಂದುತ್ತಿರುವ ಧನಿಕತ್ವ ಪದ್ಧತಿಯು ದ್ವಿಮುಖವಾಗಿ ಎಂದರೆ ಫ್ಯಾಸಿಸಂ ರೂಪವಾಗಿಯೂ ಇಂಪೀರಿಯಲಿಸಂ (ಸಾಮ್ರಾಜ್ಯತ್ವ) ರೂಪವಾಗಿಯೂ ಹೊರಟುಕೊಂಡಿದೆ. ಈ ಎರಡು ರೂಪಗಳೂ ಬೇರೆ ಬೇರೆ ದೇಶಗಳಲ್ಲಿ ಆಯಾಯಾ ಜನಾಂಗಗಳ ಗುಣಗಳಿಗೆ ಅನುಗುಣವಾಗಿ ಅಲ್ಲಿನ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಹೊಂದಿಕೊಂಡ ಪ್ರಜೆಗಳ ಪ್ರಗತಿಯನ್ನು ತಡೆಯುತ್ತಿವೆ. ಈ ಎರಡು ರೂಪಗಳೂ ಒಂದೊಂದು ಸಾರಿ ಒಂದಕ್ಕೊಂದು ಬಲವಾಗಿದ್ದರೂ ಆಗಿಂದಾಗ್ಗೆ ಪರಸ್ಪರ ಹೋರಾಟಕ್ಕೆ ನಿಂತುಕೊಳ್ಳುತ್ತವೆ. ಏಕೆಂದರೆ ತನ್ನನ್ನು ತಾನೇ ತಿಂದುಕೊಳ್ಳುವ ಸ್ವಭಾವವು ಈ ಪದ್ಧತಿಯದು. ಪಶ್ಚಿಮ ದೇಶಗಳಲ್ಲಿ ಉದ್ಭವಿಸುವ ಸೋಷಿಯಲಿಸಂ ಭಾವನೆಯು ಪೂರ್ವ ದೇಶಗಳಲ್ಲಿಯೂ ಮತ್ತಿತರ ಪರಾಧೀನ ದೇಶಗಳಲ್ಲಿಯೂ ಏಳುವ ರಾಷ್ಟ್ರೀಯತೆಯು ಈ ಫ್ಯಾಸಿಸಂ ಮತ್ತು ಇಂಪೀರಿಯಲಿಸಂ ಪದ್ಧತಿಗಳ ಯುಗ್ಮವನ್ನು ವಿರೋಧಿಸುತ್ತಿವೆ. ಪೂರ್ವ ದೇಶಗ

(8ನೇ ಪುಟಕ್ಕೆ ಸಾಗಿದೆ.)

ಕೊಡಗು

ಮೂರ್ತಿ ತಾ. ೨೪ನೇ ಶುಕ್ರವಾರ ೧೯೩೬.

ಜನಾಂಗಗಳ, ಕೂಟದ ನಟನೆ.

ಕಳೆದ ಏಳು ದೀರ್ಘ ತಿಂಗಳುಗಳಿಂದ ಅಬಿಸೀನಿಯೂದಲ್ಲಿ ಹತ್ಯಕಾಂಡವು ಎಡೆಬಿಡದೆ ನಡೆಯುತ್ತಾ ಇದೆ. ಪ್ರಪಂಚದಲ್ಲಿ ಶಾಂತಿಸ್ಥಾಪನೆ ಮಾಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಜನಾಂಗಗಳ ಕೂಟವು ಯುದ್ಧ ಮಾಡುತ್ತಿರುವ ಎರಡು ಜನಾಂಗಗಳಿಗೆ ಯುದ್ಧ ನಿಲ್ಲಿಸಲು ಅಪ್ಪೀಲು ಮಾಡುತ್ತಲೇ ಇದೆ. ಜನಾಂಗಗಳ ಕೂಟದ ಸ್ಥಾಪಕರಲ್ಲಿ ಒಬ್ಬರಾದ ಇಟಲಿಯ ಜನಾಂಗವು ಆ ಕೂಟವನ್ನು ಲಕ್ಷಿಸದೆ ಇತೋಪಿಯೂದಲ್ಲಿ ನಿಷ್ಕಾರಣವಾಗಿ ಯುದ್ಧವನ್ನು ಹೂಡಿಯೇ ಬಿಟ್ಟಿತು. ಆಗ್ಗೆ, ತಪ್ಪನ್ನು ಇಟಲಿಯ ಮೇಲೆ ಹೊರಿಸಿ, ಆ ಕೂಟವು ಅಬಿಸೀನಿಯಕ್ಕೆ ಸಹಾಯಮಾಡುವದೆಂದು ಹೇಳಿತು. ಇಟಲಿಯನ್ನು ಸರಿಮಾಡಿದ ದಾರಿಗೆ ತರಲು ಆ ಕೂಟದ ಮೆಂಬರು ಜನಾಂಗಗಳು ಪ್ರತ್ಯೇಕ ಪ್ರತ್ಯೇಕವಾಗಿ ವರ್ತಿಸದೆ ಒಟ್ಟುಗೂಡಿ ವರ್ತಿಸುವುದೇ ಉತ್ತಮವೆಂಬ ಧ್ಯೇಯದಿಂದ ಆ ಕೂಟದ ಕಮಿಟಿ, ಕೌನ್ಸಿಲ್‌ಗಳ ವಿಂಟಿಂಗುಗಳನ್ನು ಮಾಡುತ್ತಾ ದಿನ್ನೂಕುತ್ತಾ ಒಂದರು. ಹಲವು ದಿವಸಗಳ ನಂತರ ಇಟಲಿಯ ಮೇಲೆ ಆರ್ಥಿಕ ಬಹಿಷ್ಕಾರವನ್ನು ಹೂಡಿದರು. ಅದನ್ನೂ ಕೂಡ ಶಿಸ್ತಿನಿಂದ ಖಡ್ಡಾಯವಾಗಿ ಜಾರಿಗೆ ತರುವದಕ್ಕೆ ಪ್ರತಿಯೊಂದು ಜನಾಂಗವೂ ಮನಸ್ಸೇ ಇಚ್ಛೆ ಮಾಡಲು ಬಿಟ್ಟಿತು. ಆದುದರಿಂದ ಈ ತರಹದ ಬಹಿಷ್ಕಾರದಿಂದ ಇಟಲಿಗೆ ಹೆಚ್ಚಿನ ಧಕ್ಕೆ ತಟ್ಟಲಿಲ್ಲ. ಇಟಲಿಗೆ ಎಂಡೆ ಕಳುಹಿಸುವುದನ್ನು ನಿಲ್ಲಿಸಿದರೆ ಅದು ಸ್ವಲ್ಪ ಮಟ್ಟಿಗೆ ಜಗ್ಗುವದೆಂದು ಗೊತ್ತಾಯಿತು. ಆದರೆ ಅದನ್ನು ಜಾರಿಗೆ ತರುವ ವಿಷಯ ಜನಾಂಗಗಳ ಕೂಟದ ಕಮಿಟಿಯವರು ಆಲೋಚನೆ ಮಾಡುತ್ತಿರುವದೇ ಹೊರತು ಕದನವು ಪ್ರಾರಂಭವಾಗಿ ಏಳು ತಿಂಗಳುಗಳಾದರೂ ಇನ್ನೂ ಜಾರಿಗೆ ತಂದಿರುವುದಿಲ್ಲ. ಈ ಮಧ್ಯೆ ರಾಜಿ ಸಂಧಾನಗಳನ್ನು ನಡಿಸಲು ಇತ್ತಂಡ ಪಕ್ಷದವರೂ ತತ್ಕಾಲ ಯುದ್ಧ ನಿಲ್ಲಿಸಬೇಕೆಂದು ಈ ಕೂಟದವರು ಅಪ್ಪೀಲು ಮಾಡಿದರು. ಆದೂ ಫಲಕಾರಿಯಾಗಲಿಲ್ಲ.

ಇತೋಪಿಯನರು ಇಟಲಿಯವರಂತೆ ಅಧುನಿಕ ಯುದ್ಧ ಶಸ್ತ್ರಗಳಿಂದ ಕೂಡಿದವರಲ್ಲ. ಅವರು ಪೂರಾತನ ಕಾಲದ ಯುದ್ಧ ರೀತಿಯನ್ನೇ ನಂಬಿರುವವರು. ಶಾಂತಿಸ್ಥಾಪನೆಗಾಗಿ ಸೇರಿಸಿಕೊಂಟಗಟ್ಟಿರುವ ಜನಾಂಗಗಳ ಕೂಟವು ಅದರ ಒಂದು ಮೆಂಬರಾದ ಇತೋಪಿಯದ ಮೇಲೆ ಅನ್ಯಾಯವಾಗಿ ಇನ್ನೊಂದು ಮೆಂಬರಾದ ಇಟಲಿಯು ದಂಡೆತ್ತಿ ಬಂದಲು ಬಿಡಲಿಕ್ಕಿಲ್ಲವೆಂಬ ಭರವಸೆಯಿಂದ ಅಬಿಸೀನಿಯವು ಯುದ್ಧದ ತಯಾರಿಯನ್ನು ಮಾಡಿಕೊಳ್ಳಲಿಲ್ಲ. ಜನಾಂಗಗಳ ಕೂಟದ ಕೋರಿಕೆಗಳಿಗೆ ಗಮನಿಸದೆ ಇಟಲಿಯು ಎಲ್ಲಾ ತಯಾರಿಯನ್ನು ಮಾಡಿಕೊಂಡು ಅಬಿಸೀನಿಯೂದ ಮೇಲೆ ಬಿತ್ತು. ನಂತಕ್ಕವೂ ಈ ಕೂಟದವರು ಅಬಿಸೀನಿಯಕ್ಕೆ ಸಹಾಯ ಮಾಡುವೆವೆಂಬ ಅಭಯವನ್ನೀಡುತ್ತಾ ಬಂದರು. ಆದರೆ ಇಟಲಿಯು ಇದಕ್ಕೆ ಹೆದರದೆ ಅಬಿಸೀನಿಯೂದ ಮೇಲೆ ತನ್ನ ಫಿರಂಗಿ, ಟ್ಯಾಂಕ್ ಮುಂತಾದ ಆಯುಧಗಳಿಂದ ಧಾಳಿ ನಡಿಸಿದರು; ಮೂತ್ರವಲ್ಲ ವಿಮಾನಗಳಿಂದ ಪಟ್ಟಣಗಳ ಮೇಲೆ ಬಾಂಬುಗಳನ್ನು ಹಾಕಿ ಹೆಂಗಸರು ಮಕ್ಕಳನ್ನೂ ಕೊಲ್ಲುತ್ತಾ ಬಂದರು; ಇದೂ ಸಾಲದಕ್ಕೆ, ನಾಗರೀಕ ಜನಾಂಗಗಳೊಳಗಿರುವ ಒಪ್ಪಂದವನ್ನು ಮುರಿದು ವಿಷಗಾಳಿಯ ಪ್ರಯೋಗ ಮಾಡುತ್ತಿರುವರು. ಈ ಅಮಾನುಷ ಕೃತ್ಯದಿಂದ ಹಲವು ನಿರ್ದೋಷಿ ಜನರು ಹೆಂಗಸರು, ಮಕ್ಕಳೂ ಸಮೇತ ನರಳಿ ಸಾಯುತ್ತಿರುವರು. ಆದರೂ ಕೂಡ ಜನಾಂಗಗಳ ಕೂಟವು ಇಟಲಿಯನ್ನು ತಡೆಯಲಿಲ್ಲ. ಅಬಿಸೀನಿಯೂದ ಚಕ್ರವರ್ತಿಯವರು ಈ ಕೂಟಕ್ಕೆ ಅಪ್ಪೀಲು ಮಾಡುತ್ತಾ ಬಂದಿರುವರು. ಇದರೊಂದಿಗೆ ಘೋಯಳ್ಳ ಉಪ್ಪು ಹಾಕಿದಂತೆ ಇಟಲಿಯವರು—ಅಬಿಸೀನಿಯೂದವರು ಇಟಲಿಯ ಸೈನಿಕರನ್ನು ಹಿಂಸಿಸಿದರೆಂಬ ನೆಪವನ್ನು ಹೂಡಿ ಯುದ್ಧದಲ್ಲಿ ಘಾಯವಾದವರಿಗೆ ಸಹಾಯಮಾಡಲು ಹೋಗಿರುವ ಇತರ ರಾಜ್ಯಗಳ ರೆಡ್ಡ್‌ಕ್ರಾಸ್ ಸಂಘದವರ ಮೇಲೂ ಬಾಂಬುಗಳನ್ನು ಹಾಕಿದರಲ್ಲದೆ, 'ಇತೋಪಿಯದ ಸೇಗಸಂವರು ರಾಜ್ಯವನ್ನು ತ್ಯಜಿಸಿಬಿಟ್ಟರು; ಅವರು ಮೃತರಾದರು, ಅವರ ಮಗನು ರಾಜಗೆ ಬರಲಿರುವನು' ಎಂಬ ಸುಳ್ಳು ವಾರ್ತೆಗಳನ್ನು ಪ್ರಕಟಿಸುತ್ತಿರುವರು. ಅಲ್ಲದೆ ಅಬಿಸೀನಿಯೂದ ಪಾಳಯಗಾರರಿಗೆ ಲಂಚವನ್ನು ಕೊಟ್ಟು ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಯತ್ನಿಸಿದರು. ಇಷ್ಟಾದರೂ ನ್ಯಾಗಸರು ಮತ್ತು ಏರಿ ಇತೋಪಿಯನರು ಧೈರ್ಯಗೆಡದೆ ದೇವರ ಮೇಲೆ ಭರವಸೆಯಿಟ್ಟು ಕಾದಾಡುತ್ತಾ ಒಂದಿರುವರು. ಜನಾಂಗಗಳ ಕೂಟದಿಂದ ತನಗೆ ಸಹಾಯ ದೊರೆಯುವದೆಂದು ನಿರೀಕ್ಷಿಸುತ್ತಾ ಇದ್ದರು.

ಆದರೆ ಮೊನ್ನೆ ತಾನೇ ನಡೆದ ಜನಾಂಗಗಳ ಕೂಟದ ಕೌನ್ಸಿಲು ವಿಂಟಿಂಗಿನಲ್ಲಿ ಇಟಲಿಯ ಪ್ರತಿನಿಧಿಯು ರಾಜಿಸಂಧಾನ ಪ್ರಾರಂಭಿಸುವ ಮೊದಲು ಇತೋಪಿಯದ ಪ್ರಾಮುಖ್ಯ ಸ್ಥಳಗಳೆಲ್ಲಾ ತನ್ನ ಅಧೀನದಲ್ಲಿರಬೇಕೆಂದೂ, ಇಲ್ಲವಾದರೆ ತಾವು ಯುದ್ಧ ನಿಲ್ಲಿಸಲಾರೆವೆಂದೂ ಘಂಟಾಘೋಷವಾಗಿ ಹೇಳಿ ಬಿಟ್ಟರು. ಆದರೂ ಕೂಡ ಆ ಕೂಟದವರು ಇಟಲಿಯ ಮೇಲೆ ಏನೆಂದೂ ಕ್ರಮಜರುಗಿಸಲು ನಿಶ್ಚಯಿಸದೆ ಪುನಹ ಅವರಿಗೆ ಯುದ್ಧ ನಿಲ್ಲಿಸಲು ವಿನಂತಿಮಾಡಿರುವರು. ಇದರಿಂದ ಜನಾಂಗಗಳ ಕೂಟದವರು ಅಬಿಸೀನಿಯರ ಕೈಬಿಟ್ಟರೆಂಬುದು ವ್ಯಕ್ತವಾಗುತ್ತದೆ.

ಯುದ್ಧವನ್ನು ನಿಲ್ಲಿಸಿ ಶಾಂತಿಸ್ಥಾಪನೆ ಮಾಡಬೇಕೆಂಬ ಶಾಂಕ್ಷೆಯು ಜನಾಂಗಗಳ ಕೂಟಕ್ಕೆ ಇದ್ದಿದ್ದಲ್ಲಿ ಪಕ್ಷದಲ್ಲಿ ಪ್ರಾರಂಭದಲ್ಲೇ ಏಲಿಟರಿ ಕ್ರಮಜರುಗಿಸಿ ಇಟಲಿಯನ್ನು ತಡೆಯಬಹುದಿತ್ತು. ಅದು ತಪ್ಪಿದರೂ, ಇತರ ರಾಷ್ಟ್ರಗಳ ರೆಡ್ಡ್‌ಕ್ರಾಸ್ ಸಂಘದವರ ಮೇಲೆ ಬಾಂಬುಗಳನ್ನು ಹಾಕದಾಗ್ಯೆ ಇಟಲಿಯವರನ್ನು ಶಿಕ್ಷಿಸಬಹುದಿತ್ತು. ಇದನ್ನು ಬಿಟ್ಟರೂ, ಯಾವ ನಾಗರೀಕತೆಗೂ ವಿರುದ್ಧವಾಗಿ ವಿಷಗಾಳಿಯನ್ನು ಪ್ರಯೋಗಮಾಡಿದ ರಾಕ್ಷಸೀ ಕೃತ್ಯವನ್ನಾದರೂ ಖಂಡಿಸಿ ಇತೋಪಿಯನರಿಗೆ ಧನ ಮತ್ತು ವಿಲಿಟರಿ ಸಹಾಯ ಕೊಡಬೇಕಿತ್ತು. ಇದು ಯಾವುದನ್ನೂ ಮಾಡದೆ, ಪುನಹ ಇಟಲಿಗೆ ಅಪ್ಪೀಲು ಮಾಡಿರುವುದನ್ನು ನೋಡಿದರೆ ಈ ಕೂಟವು ಅಬಿಸೀನಿಯಕ್ಕೆ ಸಹಾಯ ಮಾಡುವುದೆಂದು ಬರೀ ನಟನೆ ಮಾಡುತ್ತಿದೆಯಲ್ಲದೆ ಬೇರೆಯಲ್ಲವೆಂದು ತೋರುತ್ತದೆ. ಕಪ್ಪು ಜನಾಂಗವಾದ ಇತೋಪಿಯನ ನಾಶವಾದರೆ ತಮಗೇನು; ಆದರೆ ಯೂರೋಪಿನಲ್ಲಿ ಪೂತ್ರ ಶಾಂತಿಭಂಗವಾಗದಂತೆ ಮೂತ್ರ ನೋಡಿಕೊಂಡರೆ ಸಾಕೆಂದು ಈ ಕೂಟದವರ ಅಭಿಪ್ರಾಯವಾಗಿರಬಹುದೇ? ಇದು ನಿಜವಾದರೆ ಈ ಕೂಟದವರ ಪಕ್ಷಪಾತ ಬುದ್ಧಿಯು ವಿಷದವಾಗುವುದು; ಮತ್ತು ಈ ಯುದ್ಧದ ಪರಿಣಾಮವು ಯೂರೋಪಿಗೂ ಹರಡದೆ ಇರಲಾರದು. ಇದು ಇಟಲಿಯ ಸರ್ವಾಧಿಕಾರಿಯ ಮುಸ್ಸೊಲಿನಿಯವನ್ನು ಕೆಡೆಯುವ ಮನ ಬಂದಂತೆ ಯುದ್ಧ ಮಾಡಲು ಬಿಟ್ಟಂತೆ, ಬೇಗನೆ ಜರ್ಮನಿಯ ಸರ್ವಾಧಿಕಾರಿಯೂದ ಹಿಟ್ಲರ್ ಈ ಕೂಟವನ್ನು ಲಕ್ಷಿಸದೆ ಯುದ್ಧಕ್ಕಾರಂಭಿಸುವುದರಲ್ಲಿ ಅಶ್ಚರ್ಯವೇನು. ಈಗಾಗಲೆ ಜರ್ಮನಿಯು ಲೊಕಾರ್ನೊ ಒಪ್ಪಂದನ್ನು ಮುರಿದಿರುವುದು. ಇಂದು ಇತೋಪಿಯೂದಲ್ಲಿ ಇಟಲಿಯ ದಬ್ಬಾಳಿಕೆಯು ಜಯ ಪ್ರದವಾಗಲು ಜನಾಂಗಗಳ ಕೂಟವು ಅವಕಾಶನೂಡಿಕೊಟ್ಟರೆ, ಆ ಕೂಟದ ಉದ್ದೇಶವೇ ಮಣ್ಣುಪಾಲಾಗುವುದರಲ್ಲಿ ಸಂಶಯ ವಿಲ್ಲ. ಈ ಕೂಟವನ್ನು ನಂಬಿ ಮೋಸಹೋದ ಧೀರ ಇತೋಪಿಯಕ್ಕೆ ಈಗ ಒಂದೇ ದಾರಿ ಉಳಿದಿದೆ. ದೇವರ ಮೇಲೆ ತನಗಿರುವ ಭಕ್ತಿಯನ್ನು ಕಡಿಮೆ ಮಾಡದೆ ತನ್ನ ಸ್ವಾತಂತ್ರ್ಯವನ್ನು ಕಾಪಾಡಲು ಬೇರೆಯವರನ್ನು ಅವಲಂಬಿಸದೆ ಅಖೈರು ಛಲಕ್ಕೆ ತಾನೇ ಹೋರಾಡಬೇಕಾಗಿದೆ. ನ್ಯಾಯ ಅನ್ಯಾಯಗಳ ಹೋರಾಟದಲ್ಲಿ ಜಯ ಯಾರಿಗಾಗುವುದೆಂದು ಇನ್ನೂ ನೋಡಬೇಕಷ್ಟೆ.

ಹರಿಜನರ ಸಭೆ.

ಕೊಡಗಿನ ಕಂಬಟ್ಟಿ ಹರಿಜನರ ವಿಂಟಿಂಗೊಂದು ಈ ತಾರೀಕು ೭ನೇ ಸೋಮವಾರ ಗೋಣಿಕೊಪ್ಪಲು ಸಮೀಪ ಹಾತೂರು ಶಾಲೆಯ ಬಳಿ ಮೈದಾನದಲ್ಲಿ ನಡೆಯಿತು. ಏಳು ಗ್ರಾಮಗಳಿಂದ ಸುಮಾರು 85 ಹರಿ ಜನರು ಹಾಜರಿದ್ದರು. ಕೆಲವು ಕೊಡವ ಮಹನೀಯರೂ ಬಂದಿದ್ದರು. ಕೊಡಗಿನ ಹರಿಜನ ಸೇವಾ ಸಂಘದ ಕಾರ್ಯದರ್ಶಿ ಶ್ರೀಯುತ ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಕೈಕೇರಿ ಗ್ರಾಮದ ಹರಿಜನ ಕುಂಡ ಹುಡುಗನೊಬ್ಬನ ಇಂಪಾದ ಪ್ರಾರ್ಥನೆಯ ಗೀತದಿಂದ ಸಭೆಯು ಪ್ರಾರಂಭವಾಯಿತು. ಕೈಕೇರಿ ಗ್ರಾಮದ ಫ್ರೌಢ್ ಶಾಲೆಯಲ್ಲಿ ಓದುವ ಒಬ್ಬ ಹರಿಜನ ವಿದ್ಯಾರ್ಥಿಯು ಹರಿಜನರ ಶುಚಿತ್ವ, ವಿದ್ಯಾಭ್ಯಾಸ, ಶುಭಶೌಚಾಲಾನಗಳಲ್ಲಿ ಮಿತವ್ಯಯ, ಅಸ್ಪೃಶ್ಯತಾ ನಿವಾರಣೆ ಮುಂತಾದ ವಿಷಯಗಳನ್ನು ಕುರಿತು ಭಾಷಣ ಮಾಡಿದರು. ಅಧ್ಯಕ್ಷರಿಗೆ ಪಂಡಿತೆಗಳಿಂದ ವಿಂಟಿಂಗು ಕೊನೆಗೊಂಡಿತು. ಮಧ್ಯಾಹ್ನ ಪಂಡಿತೆ ತೀರ್ಥವಿತ್ತು.

ಸ್ವಾಗತ ಕಮಿಟಿ ವಿಂಟಿಂಗು.

ಕೊಡಗು ಜನವಿದ್ಯಾವರ್ಧಕ ಸಂಘದ 23 ನೇ ವಾರ್ಷಿಕ ಸಭೆಯ ಸ್ವಾಗತ ಕಮಿಟಿಯ ವಿಂಟಿಂಗು ಈ ತಾ. 22 ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಮೆ. ಬಿಟ್ಟಿಯಂಡ ಉತ್ತಯ್ಯನವರು ಅಧ್ಯಕ್ಷರಾಗಿದ್ದರು. ಹಿಂದಿನ ವಿಂಟಿಂಗಿನ ವೃತ್ತಾಂತವನ್ನು ಓದಿ ಒಪ್ಪಿದ ನಂತರ ಸ್ವಾಗತ ಕಮಿಟಿಯ ಉದ್ಯೋಗಸ್ಥರ ಚುನಾವಣೆಯಾಯಿತು. ಮೆ. ಬಿಟ್ಟಿಯಂಡ ಉತ್ತಯ್ಯನವರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿಯೂ, ಮೆ. ವಂಡೇಪಂಡ ಸೋಮಯ್ಯನವರು ಕಾರ್ಯದರ್ಶಿಯರಾಗಿಯೂ, ಮೆ. ಅಮ್ಮಣಕಟ್ಟಂಡ ಚಂಗಪ್ಪನವರು ಜಂಟಿ ಕಾರ್ಯದರ್ಶಿಯರಾಗಿಯೂ, ಮೆ. ಚೇಯಕಪೂಡಂಡ ಭೀಮಯ್ಯನವರು ಖಜಾಂಚಿಯರಾಗಿಯೂ ಆರಿಸಲ್ಪಟ್ಟರು. ಆ ಮೇಲೆ ಸ್ವಾಗತ ಕಮಿಟಿಗೆ ಇನ್ನು ಕೆಲವು ಮೆಂಬರುಗಳು ಸೇರಿಸಲ್ಪಟ್ಟರು. ನಂತರ ನೇಮಿಸಿದ್ದ ಕಮಿಟಿ ಮೆಂಬರುಗಳಿಗೆ ರಶೀತಿ ಪುಸ್ತಕಗಳು ಹಂಚಲ್ಪಟ್ಟವು ಕಡೆಗೆ, ಮಹಾ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವಂತೆ ಪಂಡಿತ ಮದನ ಮೋಹನ ಮಾಳವೀಯರಿಗೆ ಒರೆದ ಪತ್ರಕ್ಕೆ ಇನ್ನೂ ಜವಾಬು ಬಂದಿರುವುದಿಲ್ಲವೆಂದು ಸಂಘದ ಪ್ರೆಸಿಡೆಂಟರು ತಿಳಿಸಿದರು. ಸ್ವಾಗತ ಕಮಿಟಿಯು ವಿಂಟಿಂಗನ್ನು ಪ್ರತೀ ಬುಧವಾರ ಬೆಳಿಗ್ಗೆ 11 ಗಂಟೆಗೆ ವೀರಾಜಪೇಟೆಯಲ್ಲಿ ನಡೆಸುವಂತೆ ತೀರ್ಮಾನಿಸಲಾಯಿತು. ತನ್ನನ್ನು ಸ್ವಾಗತ ಕಮಿಟಿಯು ಅಧ್ಯಕ್ಷರಾಗಿ ಆರಿಸಿದ್ದಕ್ಕೆ ವಿಂಟಿಂಗಿನ ಪ್ರೆಸಿಡೆಂಟರಾದ ಮೆ. ಬಿ ಉತ್ತಯ್ಯನವರು ಸಭಿಕರನ್ನು ವಂದಿಸಿದ ಮೇಲೆ ವಿಂಟಿಂಗು ಬಂಕಾತ ಸಾಯಿತು.

ಭಾರತದ ಹೊಸ ವೈಸರಾಯರು.

ಹಿಂದೂಸ್ಥಾನದ ಹೊಸ ವೈಸರಾಯರೂ ಗವರ್ನರ್ ಜನರಲರೂ ಆದ ಲಾರ್ಡ್ ಲಿನ್‌ಲಿತ್‌ಗೋ ರವರು ಕಳೆದ ಶುಕ್ರವಾರ ಪತ್ನಿ ಪುತ್ರಿಯರ ಸಮೇತರಾಗಿಯೂ, ಪರಿವಾರದೊಡನೆಯೂ ಬೊಂಬಾಯಿ ಬಂದರಿಗೆ ಬಂದಿಳಿದರು. ಅವರು ಹಡಗಿನಿಂದಿಳಿದು ಬಂದೊಡನೆಯೇ ಬೊಂಬಾಯಿ ಆಧಿಪತ್ಯದ ನಾನಾ ಕಡೆಗಳಿಂದ ಬಂದಿದ್ದ ಗೈತರನ್ನು ಅವರಿಗೆ ಭೇಟಿ ಮಾಡಿಸಿದರು. ಅನಂತರ ಬೊಂಬಾಯಿ ಮುನ್ಸಿಪಲ್ ಸಭೆಯವರು ವೈಸರಾಯರಿಗೆ ಅಡ್ರೆಸ್ ಒಪ್ಪಿಸಿದರು. ಆ ಸಂದರ್ಭದಲ್ಲಿ ವೈಸರಾಯರವರು ಮಾತನಾಡುತ್ತಾ ಭೂಮಿಯನ್ನು ವ್ಯವಸಾಯ ಮಾಡಿ ಜೀವಿಸುವ ರೈತನೇ ಈ ದೇಶದ ಬೆನ್ನುಮೂಳೆಯೆಂದೂ, ಅದಕ್ಕೆ ಸಂಪತ್ತಿಗೆ ಕೃಷಿಯೇ ಅಡಿಗಲ್ಲೆಂದೂ ಹೇಳಿದರು. ಮುಸ್ಲಿಮ ಸಂಘ, ವರ್ತಕರ ಸಂಘ ಮುಂತಾದ ಹಲವು ಸಂಸ್ಥೆಗಳವರೂ ಬಿನ್ನವತ್ತಳಿಕೆಗಳನ್ನು ಒಪ್ಪಿಸಿದರು. ಹೊಸ ವೈಸರಾಯರವರು ಶನಿವಾರ ದಿಲ್ಲಿಯನ್ನು ತಲಪಿ ಅಧಿಕಾರವನ್ನು ವಹಿಸಿಕೊಂಡರು. ಅವರಿಗೆ ರಾಜ್ಯಾಧಿಕಾರ ವಹಿಸಲ್ಪಟ್ಟ ನಂತರ ಅವರು ಮಾಡಿದ ಭಾಷಣವನ್ನು ರೇಡಿಯೋ ಯಂತ್ರಸಹಾಯದ ಮೂಲಕ ಇಂಡಿಯಾ ದೇಶದ ಸಮಸ್ತ ಕಡೆಗಳಿಗೆ ಮಾತ್ರವಲ್ಲದೆ ಬ್ರಿಟನ್ ಮತ್ತು ಅಮೇರಿಕಾ ದೇಶಗಳಿಗೂ ಬ್ರಾಡ್‌ಕ್ಯಾಸ್ಟ್ ಮಾಡಲಾಯಿತು. ಅಂದರೆ ಪ್ರಪಂಚದ ಆದಂತ್ಯದಲ್ಲು ಪ್ರತಿಯೊಂದು ದೇಶವೂ ಇಂಡಿಯಾ ದೇಶದ ಹೊಸ ವೈಸರವರ ಭಾಷಣವನ್ನು ಕೇಳಲು ಅವಕಾಶವಿತ್ತು.

ವೈಸರಾಯರವರು ಭಾಷಣ ಮಾಡುತ್ತಾ ದೇಶದಲ್ಲಿ ಕಾಯಿದೆ ಕಟ್ಟಲೆಗಳನ್ನೂ, ನ್ಯಾಯ ನೀತಿಗಳನ್ನೂ ಯಾವ ಕುಂದುಕವೂ ಇಲ್ಲದಂತೆ ಕ್ರಮವಾಗಿ ನಡೆಸಿಕೊಂಡು ಬರುವುದೇ ತಮ್ಮ ಪ್ರಥಮ ಕರ್ತವ್ಯವಾಗಿದೆ ಎಂದು ಹೇಳಿದರು. ಬ್ರಿಟಿಷ್ ಇಂಡಿಯಾದ ಹಲವು ಭಾಗಗಳನ್ನು ನೋಡಿಲು, ಅವಕಾಶ ಲಭಿಸಿದ್ದಿತೆಂದೂ, ದೇಶೀಯ ಸಂಸ್ಥಾನಗಳನ್ನು ನೋಡಲು ತಮಗೆ ಸಾಧ್ಯವಾಗಿಲಿಲ್ಲವೆಂದೂ, ಈಗ ಆ ಕೊರತೆಯನ್ನು ಪರಿಹರಿಸಿಕೊಳ್ಳಬೇಕೆಂದೂ ಯೋಚಿಸಿರುವದಾಗಿಯೂ ಹೇಳಿದರು. ಇಂಡಿಯಾದಲ್ಲಿರುವ ಭಾರತೀಯ ನೌಕಾ ಬಲಕ್ಕೂ, ಸೈನ್ಯಕ್ಕೂ ತಮ್ಮ ಶುಭ ಸಂದೇಶವನ್ನು ಸೂಚಿಸಿದರು. ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿರುವ ಎಲ್ಲಾ ಉದ್ಯೋಗಿಗಳನ್ನೂ, ಡಿಸ್ಟ್ರಿಕ್ಟ್ ಅಧಿಕಾರಿಗಳನ್ನೂ ಮತ್ತು ಪೊಲೀಸ್ ಅಧಿಕಾರಿಗಳನ್ನು ಹಿಂದಿಸಿದರು. ತಮಗೆ ಲಭಿಸಿರುವ ಅಧಿಕಾರ ಬಲದಿಂದ ಅವರಿಗೆಲ್ಲಾ ಸಹಾಯ ಮಾಡುವುದು ಸಾಧ್ಯವೆಂದು ಅಭಿಪ್ರಾಯಪಟ್ಟರು. ಡಿಸ್ಟ್ರಿಕ್ಟಿನ ಅಧಿಕಾರಿ

ಗಳಿಲ್ಲರೂ ತನ್ನ ತಮ್ಮ ಡಿಪ್ಪಾರ್ಟ್ಮೆಂಟುಗಳಲ್ಲಿರುವ ಹೆಣ್ಣಿಗಳ ವಿಷಯದಲ್ಲಿ ವಿಶೇಷ ಮುತುವರ್ಜಿ ವಹಿಸಿ ಅವುಗಳ ಹಿತಚಿಂತನೆ ಮಾಡಬೇಕೆಂದು ಬೋಧಿಸಿದರು. ವ್ಯವಸಾಯಮಗಾರಿಗೆ ಈಗ ಎಂಥಾ ಸಂಕ್ಷೋಭೆ ಪ್ರಾಪ್ತವಾಗಿದೆ ಎಂಬದೂ, ವ್ಯಾಪಾರವೂ ಕೈಗಾರಿಕೆಯೂ ಬಹಳ ಮಟ್ಟಿಗೆ ಕುಗ್ಗಿರುವುದೆಂಬಷ್ಟೂ ತಮಗೆ ತಿಳಿದಿದೆಯೆಂದೂ ಸೂಚಿಸಿದರು. ಸಧ್ಯದ ದರ್ಜೆಯ ಪ್ರಜೆಗಳಲ್ಲಿ ಪ್ರಬಲವಾಗಿ ಹಬ್ಬಿರುವ ನಿರುದ್ಯೋಗವನ್ನು ಕಡಮೆ ಮಾಡುವುದಕ್ಕಾಗಿ, ಕಲಾಕೌಶಲ್ಯಗಳಿಗೂ, ವೈದ್ಯಕ್ಕೂ ಹೆಚ್ಚಿನ ಉತ್ತೇಜನ ಕೊಟ್ಟು ಪ್ರಾಧಾನ್ಯವನ್ನಕ್ಕೆ ತರುವುದಕ್ಕಾಗಿ ತಾವು ಪ್ರಯತ್ನಪಡುವುದಾಗಿ ತಿಳಿಸಿದರು. ಹೊಸ ವಿಧಾನಿಕ ಸಭೆಗೆ ಆಯ್ಕೆಯಾಗಿ ಪ್ರಥಮದಲ್ಲಿಯೇ ಪ್ರಾಪ್ತವಾಗಿ ಬೆಂದು ಶಿಕ್ಷಣ ತೃಗಳಿಗೆ ಎಚ್ಚರಿಕೆ ಮಾಡಿ, ಸಂಯುಕ್ತ ಕೇಂದ್ರ ಸರಕಾರವು ಸುಲಲಿತವಾಗಿರುವಂತೆ ಬ್ರಿಟಿಷ್ ಪ್ರಜೆಯಾಗಿ ನಡೆದು ಬಲು ತಮ್ಮ ಕೈಲಾದ ಪ್ರಯತ್ನಗಳೆಲ್ಲಾ ಮಾಡಿ ಜನರ ಸಿದ್ಧಿಗೆ ಸಹಕಾರವನ್ನು ಬೇಡಿದರು.

ವೈಸರಾಯರವರು ಮತ್ತೂ ಹೇಳಿದ್ದುದ್ದೇನೆಂದರೆ—ಈ ದೇಶದಲ್ಲಿರುವ ಎಕ್ಸಿಕ್ಯೂಟಿವ್ ಮಂಡಲಿ ಮಂತ್ರಿಗಳನ್ನು ಕುರಿತು ಹಬ್ಬಿ-ಸಲು ನಾನು ಪ್ರಯತ್ನಪಡುತ್ತೇನೆ. ನಾನು ಯಾವ ಕಕ್ಷಿಯವರನ್ನೂ ಮಂತ್ರಿ ಸಂಧಿಸಿ ಅವರೆಷ್ಟನ್ನು ಹಬ್ಬಿ ಸಿದೆನೆಂದು ಆ ಕಕ್ಷಿಯ ಅಭಿಪ್ರಾಯಗಳನ್ನು ತಿಳಿದುಕೊಂಡಾಗಲೆ ಅವುಗಳಿಗೇ ಬೆಂಬಲ ಕೊಡುವೆನೆಂದಾಗಲಿ ಮಹಾಜನರು ಭಾವಿಸಬಾರದು. ಈ ದೇಶದ ಜನರಲ್ಲಿ ಪೂರ್ಣವಾದ ನಾಜಿಕೆಯನ್ನೂ ಭರವಸೆಯನ್ನೂ ಇಟ್ಟು ಎಂದೆ ಐದು ವರ್ಷಗಳ ಅವಧಿಯಲ್ಲಿ ನನಗೆ ಲಭಿಸಿಕೊಂಡ ಅಧಿಕಾರವನ್ನು ದೇಶಸೇವೆಗಾಗಿ ವಿನಿಯೋಗಿಸಿದೆನು. ಪ್ರಜೆಗಳು ನನ್ನಲ್ಲಿ ಪ್ರೀತಿ ವಿಶ್ವಾಸಗಳನ್ನಿಟ್ಟು ಸಹಕರಿಸಬೇಕೆಂದು ಪ್ರಾರ್ಥಿಸಿದರು.

ವರ್ತಮಾನ ಸಂಗ್ರಹ.

ಕೊಡಗು.

ಈ ವಾರ ವೀರಾಜಪೇಟೆಯಲ್ಲಿ ಭತ್ತದ ಕ್ವಿಂಟಾಲಿಗೆ ರೂ. 41 ಕ್ಕೆ ಹರಿಯಲ್ಪಟ್ಟು ಖರೀದಿಯಾಗಿ ತಿಳಿಯಬರುತ್ತದೆ.

ಕಳೆದ ಹುತ್ತರಿ ಹಬ್ಬದಲ್ಲಿ ನಡೆದ ಶ್ರೀಮಂಗಲನಾಡು ನೆಮ್ಮಲೆ ಗಾತ್ರಮದ ಜೊಟ್ಟಿಯಂಡಮೊಡ ಬಿಜನಿಕೇಸಿನ ವಿಚಾರವು ಸೆಷನ್ಸ್ ಕೊರ್ಟಿನಲ್ಲಿ ಈ ತಾ. 20 ರಲ್ಲಿ ಪ್ರಾರಂಭವಾಗಿದೆ

ಕೊಡಗಿನ ಕೆಂಬಟ್ಟಿ ಹರಿಜನರ ಮಹಾ ಸಭೆಯೊಂದು ಈ ತಾ. 20 ರಲ್ಲಿ ಹಾಕೂರು ಶಾಲೆ ಬಳಿ ಕೊಡಗಿನ ಹರಿಜನ ಸೇವಾ ಸಂಘದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ನಾಪೋಕ್ಲುನಾಡಿನ ದನಗಳ ಪ್ರದರ್ಶನವು ಈ ತಾ. 20 ಮತ್ತು 21 ರಲ್ಲಿ ಅಸಿಸ್ಟೆಂಟ್ ಕಮಿಷನರ್ ಮೆ. ಯಂ. ಎಸ್. ವಂದಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಫ್ರೇಜರ್‌ಪೇಟೆ ಹೋಬಳಿಯ ಸಹಕಾರಿ ಪರಿಷತ್ತು ಈ ತಾ. 18 ರಲ್ಲಿ ಸಹಕಾರಿ ಸೆಂಟ್ರಲ್ ಬ್ಯಾಂಕಿನ ಪ್ರೆಸಿಡೆಂಟರಾದ ಮೆ. ಪಿ. ಎ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಫ್ರೇಜರ್‌ಪೇಟೆಯಲ್ಲಿ ನಡೆಯಿತು.

ಏಪ್ರಿಲ್ ಪ್ರಥಮ ವಾರದಲ್ಲಿ ಪೊನ್ನಂಪೇಟೆಯಲ್ಲಿ ನಡೆದ ಬ್ಯಾಡ್‌ಮಿಂಟನ್ ಟೂರ್ನಮೆಂಟಿನಲ್ಲಿ ಗೋಣಿಕೊಪ್ಪಲು ಯೂನಿಯನ್ನಿನವರು 'ಫೈನ' ಮತ್ತು 'ಡಬ್ಲ್ಸ್'ನಲ್ಲಿಯೂ ಗೆದ್ದು ಇನಾಮಿನ ಬಟ್ಟಲುಗಳನ್ನು ಪಡೆದರು.

ಈ ತಾ. 27 ರಲ್ಲಿ ಡೆಲ್ಲಿಯಲ್ಲಿ ಕೂಡುವ ಮಾರ್ಕೆಂಟಿಂಗ್ ಆಫೀಸರುಗಳ ಪರಿಷತ್ತಿಗೆ ಕೊಡಗಿನ ಮಾರ್ಕೆಂಟಿಂಗ್ ಆಫೀಸರಾದ ಮೆ. ಕುಮಾಡ ಚಿಣ್ಣಪ್ಪನವರು ಈ ತಾ. 23 ರಲ್ಲಿ ಹೊರಟು ಹೋದರು.

ಜನರಲ್ ಕಮಾಂಡಿಂಗ್ ಆಫೀಸರಾದ ಮೇಜರ್ ಜನರಲ್ ಪ್ಲೆಮಿಂಗ್‌ರವರು ಮುಂದಿನ ಮೇ ತಿಂ 4 ರಲ್ಲಿ ಮಡಿಕೇರಿಯಲ್ಲಿ ಟೆರಿಟೋರಿಯಲ್ ಪಟಲಾಮಿನ ಇನ್‌ಸ್ಪೆಕ್ಷನ್ ಮಾಡಲಿರುವರಾಗಿ ವರ್ತಮಾನ.

ಕಳೆದ ವಾರ ಮಡಿಕೇರಿಯಲ್ಲಿ ನಡೆದ ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಕ್ರಿಕೆಟ್ ಟೂರ್ನಮೆಂಟಿನಲ್ಲಿ ಮಂಗಳೂರು ಟೀಮುಗಳು ಮೂರ್ತಿ ಭಾಗವಹಿಸಿದ್ದವು. ಕೊಡಗಿನ ಕ್ರಿಕೆಟ್ ಕ್ಲಬ್ಬಿನ ಟೀಮಿನವರು ಸಂಟ್ರಲ್ ಹೈಸ್ಕೂಲು ಟೀಮನ್ನೂ, ನಂತರ ವಿಕ್ಟೋರಿಯಾ ಕ್ಲಬ್ಬಿನ ಟೀಮನ್ನೂ ಸೋಲಿಸಿ ಇನಾಮಿನ ಬಟ್ಟಲನ್ನು ಗೆದ್ದರು.

ಮಡಿಕೇರಿ 1928 ನೇ ಕ್ಲಬ್ಬಿನ ಅಶ್ವಾಯದಲ್ಲಿ ನಡೆದ ಟೆನ್ನಿಸ್ ಟೂರ್ನಮೆಂಟಿನಲ್ಲಿ ಈ ತಾ. 20 ರಲ್ಲಿ ಕೊಡಗಿನ ಅಧಿಕಾರಿ ಅಯ್ಯೆಂಗೇರರ ಅಳಿಯನಾದ ಮೆ. ಮಂಡಿರ ಒಸವಯ್ಯನವರ ಮೇ ಅವಪ್ಪರಂಡ ಬಿ. ತಿಮ್ಮಯ್ಯನವರನ್ನು ಸೋಲಿಸಿ, ಇನಾಮಿನ ಬಟ್ಟಲನ್ನು ಗೆದ್ದರು. ಆಲ ಇಂಡಿಯಾ ಟೂರ್ನಮೆಂಟು ನಡೆಯುತ್ತಾ ಇದೆ.

ವೀರಾಜಪೇಟೆ ಹೈಸ್ಕೂಲಿನವರು ನಡಿಸಿದ ಶಿಡ್‌ಫಾರಮಿನ ಪರೀಕ್ಷೆಯ ಫಲಿತಾಂಶ—ಹಿರಿಕೇರಿ ಶಾಲೆಯಿಂದ 25 ರಲ್ಲಿ 18, ಪೊನ್ನಂಪೇಟೆ ಶಾಲೆಯಿಂದ 22 ರಲ್ಲಿ 12 ಅಮ್ಮತ್ತಿ ಶಾಲೆಯಿಂದ 19 ರಲ್ಲಿ 6, ಕಾಕೋಟುಪರಂಬು ಶಾಲೆಯಿಂದ 21 ರಲ್ಲಿ 14, ಕಕ್ಕಬೆ ಶಾಲೆಯಿಂದ 4 ರಲ್ಲಿ 3 ಮತ್ತು ನಾಪೋಕ್ಲು ಶಾಲೆಯಿಂದ 3 ರಲ್ಲಿ 2 ವಿದ್ಯಾರ್ಥಿಗಳು ತೇರ್ಗಡೆಯಾಗಿರುವರಾಗಿ ತಿಳಿಯಬರುತ್ತದೆ.

ಕಾರ್ಕಳದ ಶ್ರೀ ವೆಂಕಟರಮಣ ಸ್ವಾಮಿ ತಿಯೇಟ್ರಿಕಲ್ ಕಂಪೆನಿಯವರು ಈ ತಾ 19 ನೆಂದ ಮಡಿಕೇರಿಯಲ್ಲಿರುವ ಜನಿಗಳ ಸಂಘದ ಹಾಲ್‌ನಲ್ಲಿ ನಾಟಕಗಳನ್ನು ಅಭಿನಯಿಸಲು ಪ್ರಾರಂಭಿಸಿರುವರು. ಈಗಾಗಲೆ 'ಸ್ತ್ರೀ ಅಥವಾ ಮನೆ ಅಳಿಯ,' 'ಕಾಲೇಜ್‌ಗರ್ಲ್' ಮತ್ತು 'ಮಹಾನಂದಾ' ನಾಟಕಗಳನ್ನು ನೆರೆದವರ ಮನಸೆಜ್ಜು ವಂತೆ ಆಡಿರುವರು ಇನ್ನು 'ಗೃಹಲಕ್ಷ್ಮಿ,' 'ಮಿಸ್ 1936' ಎಂಬ ಬೋಧಪ್ರದವಾದ ಸಾಮಾಜಿಕ ಹೊಸ ನಾಟಕಗಳನ್ನಾಡಲಿರುವರು.

ಹಿಂದೂದೇಶ.

ಹಿಂದುಸ್ಥಾನಕ್ಕೆ ಹಿಂದರೆ ಸ್ವಾತಂತ್ರ್ಯವು ಹೊರೆಯಲಾರದೆಂದು ಇತಿಹಾಸ ಸರ್ಕಾರದವರು ಶ್ರೀ. ಪ್ರಭಾಷಣಗೆ ಈ ವಿಷಯದಲ್ಲಿಯೇ ತಿಳಿಸಿದುದಾಗಿ ಅಸೆಂಬ್ಲಿಯಲ್ಲಿ ಸೂಚಿಸಲ್ಪಟ್ಟಿತು

ಲಾರ್ಡ್ ಮತ್ತು ಲೇಡಿ ಲಿನ್‌ಲಿತ್‌ಗೋ ಮಂಡಲ ಆಗಮನವನ್ನು ಸೂಚಿಸುವುದಕ್ಕೂ, ಅವರ ವಿವಾಹಪ್ರ ರಜತಮಹೋತ್ಸವದ ನಿಮಿತ್ತವೂ ಹೊರ ದೇಹಲಿಯಲ್ಲಿ ಭಾನುವಾರದ ದಿನ ಸುಮಾರು 7,000 ಮಂದಿ ಒಡಂಗ್ಗರಿಗೆ ವೈಸರಾಯ್ ದಂಪತಿಗಳು ತಮ್ಮ ಸ್ವಂತ ಖರ್ಚಿನಿಂದ ಮೃಷ್ಟಾನ್ನಭೋಜನ ಮಾಡಿಸಿದರು.

ಉತ್ತರ ಕುಲದ ಒಬ್ಬ ಹಿಂದೂ ಮುನಕನ ಮತ್ತು ನಿಮ್ನ ಪಂಗಡದ ಒಬ್ಬ ಹುಡುಗಿಯ ಶವಗಳು ಹಾರಾ-ಬರ್ಡ್‌ವಾನ್ ರೈಲ್ವೆ ಕಾಲಿಗಳ ಮೇಲೆ ದೊರೆತಿರುವುದಾಗಿ ಪ್ರಕಟವಾಗಿದೆ. ಯುವಕನ ಸಂಬಂಧಿಕರು ನಿನ್ನು ಕುಲಪ ಆ ಹುಡುಗಿಯನ್ನು ಮದುವೆ ಮಾಡಿಕೊಳ್ಳುವುದಕ್ಕೆ ಇಷ್ಟಪಡದೆ ಅವನನ್ನು ಅಪಂಕಪಡಿಸುತ್ತಿದ್ದರೆಂತೂ, ಅದಕ್ಕಾಗಿ ಅವಲಿಬ್ಬರೂ ಆತ್ಮಹತ್ಯ ಮಾಡಿಕೊಂಡರೆಂದೂ ಹೇಳಲಾಗಿದೆ.

ಮದ್ರಾಸ್ ಪ್ರಸಾದ ಕಾಮರಾಜು ಎಂಬ ಬ್ರಾಹ್ಮಣ ಯುವಕನು ಕಳೆದ ವಾರ ಕಾಕಿನಾಡದಲ್ಲಿ ಕೆರೆಯೊಳಕ್ಕೆ ಬಿದ್ದು ಪ್ರಾಣ ಕಳೆದುಕೊಂಡನು. ಆತನಿಗೆ 80 ರೂಪಾಯಿ ಸಂಬಳ ಬರುತ್ತಿತ್ತೆಂದೂ, ಕಾರಣಾಂತರದಿಂದ ಅದನ್ನು 20 ರೂಪಾಯಿಗೆ ಇಳಿಸಿದರೆಂದೂ, ಈ ಸಂಬಳದಿಂದ ಸಂಸಾರವನ್ನು ನಿರ್ವಹಿಸುವುದಕ್ಕೆ ಸಾಲದೆ ಬಂದುದರಿಂದ ಆತ್ಮಹತ್ಯ ಮಾಡಿಕೊಂಡನೆಂದೂ ಹೇಳಲಾಗಿದೆ.

ಮ. ಕೇಶವ ಪ್ರಸಾದ ಕಾಮರಾಜು ಎಂಬ ಬ್ರಾಹ್ಮಣ ಯುವಕನು ಕಳೆದ ವಾರ ಕಾಕಿನಾಡದಲ್ಲಿ ಕೆರೆಯೊಳಕ್ಕೆ ಬಿದ್ದು ಪ್ರಾಣ ಕಳೆದುಕೊಂಡನು. ಆತನಿಗೆ 80 ರೂಪಾಯಿ ಸಂಬಳ ಬರುತ್ತಿತ್ತೆಂದೂ, ಕಾರಣಾಂತರದಿಂದ ಅದನ್ನು 20 ರೂಪಾಯಿಗೆ ಇಳಿಸಿದರೆಂದೂ, ಈ ಸಂಬಳದಿಂದ ಸಂಸಾರವನ್ನು ನಿರ್ವಹಿಸುವುದಕ್ಕೆ ಸಾಲದೆ ಬಂದುದರಿಂದ ಆತ್ಮಹತ್ಯ ಮಾಡಿಕೊಂಡನೆಂದೂ ಹೇಳಲಾಗಿದೆ.

ಪರದೇಶಗಳಿಂದ ಬರುವ ಅಕ್ಕಿಗೆ ಮಣ ಒಂದರ 1 ರೂ ಸುಂಕವನ್ನೂ, ಭತ್ತ ಮಣ ಒಂದಕ್ಕೆ 8 ಆಣೆಯ ಸುಂಕವನ್ನೂ ಹೊಸಬೇಕೆಂದೂ, ಸುಣ ಸುಣ ಗುಡಿಸಲು ಕೈಗಾರಿಕೆಗಳನ್ನು ಕಾಪಾಡುವ ಯೋಜನೆ ಮಾಡುವುದಕ್ಕೆ ಒಂದು ಸಮಿತಿಯನ್ನು ರಚಿಸಬೇಕೆಂದೂ, ಎಸೆಂಬ್ಲಿಯಲ್ಲಿ ತೀರ್ಮಾನವು ಮಾಡಲ್ಪಟ್ಟಿದೆ. ಹಿಂದೂದೇಶದ ಕರಾವಳಿಯಲ್ಲಿ ಹಿಂದೂ ದೇಶದ ನಾಕ್ಗಳೇ ವ್ಯಾಪಾರ ವಹಿವಾಟುಗಳನ್ನು ನಡಿಸಬೇಕೆಂಬ ಬಗ್ಗೆ ಒಂದು ತೀರ್ಮಾನವು ಒಂದಿದೆ.

ಭೀಮವರಂ ತಾಲೂಕಿಗೆ ಸೇರಿದ ನಿದ್ದವಿರಂ ಎಂಬ ಹಳ್ಳಿಯ 5 ಮಂದಿ ಪ್ರಾಥಮಿಕ ಶಾಲಾ ಉಪಾಧ್ಯಾಯರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಚುನಾವಣೆಯಲ್ಲಿ ಭಾಗವಹಿಸಿ ಕಾಂಗ್ರೆಸ್ ಕಕ್ಷಿಯವರಿಗೆ ಓಟು ಮಾಡಿದರೆಂದು ಆಗ್ಗೆ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟಾಗಿದ್ದ ಜಸ್ಟಿಸ್ ಕಕ್ಷಿಯ ವೆಂಬರು ಅವರನ್ನು ಕೆಲಸದಿಂದ ವಜಾ ಮಾಡಿದ್ದರು. ಈಗ ಹೊಸ ಅಧ್ಯಕ್ಷರು ಚುನಾವಣೆಯಾದ ಮೇಲೆ ಅವರು ಅವರನ್ನೆಲ್ಲಾ ಮತ್ತೆ ಕೆಲಸಕ್ಕೆ ನೇಮಿಸಿಕೊಂಡಿರುತ್ತಾರೆಂದು ಪ್ರಕಟವಾಗಿದೆ.

ಸಂಯುಕ್ತ ಸಂಸ್ಥಾನದ ಲಿಬರಲ್ ಕಕ್ಷಿಯವರ ಮಹಾ ಸಭೆಯು ಕಳೆದ ಶನಿವಾರ ಫೈಜಾಬಾದಿನಲ್ಲಿ ನಡೆಯುತು. ಹೊಸ ಇಂಡಿಯಾ ಖಾ ನೂನನ್ನು ಸಭೆಯು ಅಧ್ಯಕ್ಷರಾಗಿದ್ದ ರಾ. ಬ ಥಕ ರ ಚಿನುನೂನ್ ಸಿಂಗ್‌ರವರು ಬಹಳ ತೀಕ್ಷ್ಣವಾಗಿ ಖಂಡಿಸಿದರು. ಈ ಸಭೆಯಲ್ಲಿ ಲಿಬರಲ್ ಕಕ್ಷಿಯ ಪ್ರತಿನಿಧಿಗಳು ನಡೆಯಬೇಕಾಗಿರುವ ಕಾರ್ಯಕ್ರಮಗಳನ್ನು ಸೂಚಿಸುವ ಮುಂದಿನ ಸಣ ವನ್ನು ನಿರ್ಣಯಿಸಿದರು. ಮುಂದಿಟ್ಟರು. ಅವರಲ್ಲಿ ಹೇಳುವುದೇನೆಂದರೆ— ಕಿಂಡಿಯಾ ಆಕ್ಟನ್ನು ತಿದ್ದುಪಡಿ ಮಾಡಲು ಬಲವಾದ ಪ್ರಯತ್ನಗಳನ್ನು ಮಾಡಬೇಕು. ಈಗ ಜಾರಿಯಲ್ಲಿ ಎರ ಜ್ಯಾಡಳಿತ ಕ್ರಮದಿಂದ ಪ್ರಜೆಗಳಿಗೆ ಎಷ್ಟು ಸಾಲಭ್ಯ ದೆಸೆಯುವುದು ಸಾಧ್ಯವೊ ಅಷ್ಟನ್ನು ಬದಗಿಸಿಕೊಡುವುದು. ಪಬ್ಲಿಕ್ ಖರ್ಚು ಹೆಚ್ಚಗಳ ಆರ್ಥಿಕ ಸ್ಥಿತಿಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯ ನಡಿಸುವುದು. ನಿರುದ್ಯೋಗ ನಿವಾರಣೆ ಮಾಡಲು ನಡಿಸಬೇಕಾದ ಕಾರ್ಯಕ್ರಮಗಳ ಜವಿಷಿನ್ನಾರಿಂಗೆ ತೊಂದರೆಯಾಗದಂತೆ ರೈತರಿಗೆ ಉಪಯೋಗವಾಗುವ ಖರ್ಚು ಇನಿನ ರಿಂಚನೆ. ಕೂಲಿ ವಿತರನನು ಸ್ಥಿತಿಗತಿಯನ್ನು ಉತ್ತಮಗೊಳಿಸುವುದು. ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸುವುದು. ಅಸ್ಪೃಶ್ಯತೆ ನಿವಾರಣೆ. ಕೋಮುವಾರು ಸಂಬಂಧವಾಗಿ ವಿಷಯಗಳಲ್ಲಿ ನಿಷ್ಪಕ್ಷ ಪಾತದಿಂದ ವರ್ತಿಸುವುದು. ಇವೇ ಮುಂತಾದವು.

ವಿದೇಶ.

ಈಸ್ಟರ್ ಹಬ್ಬದ ಶಾಲಗಳಲ್ಲಿ ಹಿಂಸೆ ಎಂದೂ ಆಗದಷ್ಟು ಭಳಿಯು ಈ ಸಲ ಇಂಗ್ಲೆಂಡಿನಲ್ಲಿ ವ್ಯಾಪ್ತವಾಗಿದ್ದಿತೆಂದೂ, ಅನೇಕ ಅಪಘಾತಗಳೂ, ವಿನೋದಾದಿಗಳೂ ಮಳೆಯು ಮತ್ತು ಮುಂಜಿನ ದೆಸೆಯಿಂದ ನಿಲ್ಲಿಸಬಿಡಬೇಕಾಯಿತೆಂದೂ ಪ್ರಕಟವಾಗಿದೆ.

ಇಟಲಿಯ ಸೇನಾಧಿಕಾರಿಯೂದ ಸೀನಾರ್ ಮುಸೋಲಿಯವರ ಒಂದು ಭಾರಿ ಕಾಚಿನ ಪ್ರತಿಮೆಯು ರೋಮ್ ನಗರದಲ್ಲಿ ತಯಾರಾಗುತ್ತಿದೆ. ಇದು 213 ಅಡಿ ಎತ್ತರವಿದೆ. ಪ್ರಪಂಚದಲ್ಲಿರುವ ಎಲ್ಲಾ ಪ್ರತಿಮೆಗಳಿಗಿಂತಲೂ ಇದು ಭಾರಿಯಾಗಿರುವುದೆಂದು ಹೇಳಲಾಗಿದೆ.

ದಕ್ಷಿಣ ಅಮೇರಿಕ ದೇಶದ ಅರ್ಜಂಟೈನ್ ಪ್ರಜಾಧಿರತ್ಯಕ್ಕೆ ಸೇರಿದ ಪೊರ್ಟೊ ಎಂಬ ಊರಿನ ಬಳಿ ಎತ್ತರು ವಿರೂಪಗೆಳು ಆಗಾಶಕ್ಕೆಷ್ಟಲ್ಲಿ ಜಾಡಿಕೆಳ್ಳಿಂದ ಧಿಕ್ಕಿ ಹೊಡೆದು ಬಿಸ್ಸು ಯುಂಕ್ಯದೊಳಗಿದ್ದವರ ಪೈಕಿ ಮೂವರು ಕೂಡಲೇ ತೀರಿಹೋಗಿ ಒಬ್ಬನಿಗೆ ವಿಶೇಷಗಾಯವಾಗಿರುವುದೆಂದು ತಿಳಿದುಬಂದಿದೆ.

ಕೆಲವು ದಿನಗಳ ಕೆಳಗೆ ಸಿರಿಯಾ ದೇಶಕ್ಕೆ ಸೇರಿದ ಜಾಫ ಎಂಬಲ್ಲಿ ಒಬ್ಬ ಯೆಹೂದ್ಯನು ಖೂನಿಯಾದನು. ಇದರ ಫಲವಾಗಿ ಕಳೆದ ವಾರ ಜಾಫಾದಲ್ಲಿ ಯೂರೋ ಇಬ್ಬರು ಅರಬ್ಬಿಯವರನ್ನು ಕೊಂದರು. ಈ ಅರಬ್ಬಿಯವರ ಶವಸಂಸ್ಕಾರ ನಡೆಯುತ್ತಿರುವ ಸಂದರ್ಭದಲ್ಲಿ ಯೆಹೂದ್ಯರಿಗೂ ಅರಬ್ಬಿಯವರಿಗೂ ಕಲಹ ಉಂಟಾಗಿ ಪೊಲೀಸಿನವರು ಗುಂಡು ಹೊಡೆದು ಗಲಭೆಯನ್ನು ಶಮನಮಾಡಬೇಕಾಯಿತು. ಯೆಹೂದ್ಯರ ಕಡೆ 9 ಮಂದಿ ತೀರಿಹೋಗಿ 39 ಜನರಿಗೆ ವಿಶೇಷ ಗಾಯಗಳಾದವೆಂದು ತಿಳಿದುಬಂದಿದೆ ಈಚೆಗೆ ಗಲಭೆಯು ಹತೋಟಿಗೆ ಬಂದಿದೆಯೆಂದು ಪ್ರಕಟವಾಗಿದೆ.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರಾದ ಮಿ. ರೂಸ್ವೆಲ್ಟ್‌ರವರು ಕಳೆದ ವಾರ ವೇರಿಲಾಂಡ್ ಯಂಗ್ ಡೆಮೊಕ್ರಾಟಿಕ್ ಕ್ಲಬ್ ಎಂಬ ಸಂಸ್ಥೆಯಲ್ಲಿ ಭಾಷಣ ಮಾಡುತ್ತಾ ಅಮೇರಿಕಾ ದೇಶದ ಸಂಪದಭಿವೃದ್ಧಿಗೆ ಆಡರಿಸಬೇಕಾದ ಹಲವು ಕಾರ್ಯಗಳನ್ನು ಸೂಚಿಸಿದರು. ಅವರ ಸಲಹೆಗಳೇ ನೆಂದರೆ—ಸನೂಜ ಸುಧಾರಣೆಯು ಇನ್ನೂ ಅಡಿಪಾಯದಲ್ಲಿದೆ. 1928—29 ನೇ ಇಸವಿಯಿಂದಲೂ ದೇಶದ ಉತ್ಪತ್ತಿಯೂ, ಲಾಭವೂ ಹೆಚ್ಚುತ್ತಿದ್ದಾಗ್ಯೂ ನಿರುದ್ಯೋಗವೂ ಪ್ರಬಲವಾಗುತ್ತಿದೆ. ಆಹುದರಿಂದ ದೇಶದಲ್ಲಿ ಸುಪದಭಿವೃದ್ಧಿಯಾಗುತ್ತಿದೆಯೆಂದರೆ ಸಾಲದು. ನಿರುದ್ಯೋಗವೂ ಕಡಮೆಯಾಗಬೇಕು. ಅದಕ್ಕಾಗಿ ಸಮಸ್ತ ಪ್ರಜೆಗಳ ಸುಪದಭಿವೃದ್ಧಿಯಾಗಬೇಕು. ವಿದ್ಯಾರ್ಥಿಗಳು ಶಾಲೆಯನ್ನು ಬಿಡುವ ವಯಸ್ಸನ್ನು ಹೆಚ್ಚಿಸಬೇಕು. ವಯೋತೀತರಾದ ಕೆಲಸಗಾರರಿಗೆಲ್ಲಾ ಪೆನ್‌ಷನ್ ಕೊಟ್ಟು ಕೆಲಸದಿಂದ ನಿವೃತ್ತಿಗೊಳಿಸಬೇಕು. ಕಾರ್ಖಾನೆಗಳಲ್ಲಿ ಕೆಲಸದ ಅವಧಿಯನ್ನು ಕಡಿಮೆ ಮಾಡಬೇಕು. ವರ್ತಾರ್ಜ್ಯಂಶವೂ ಪ್ರಜೆಗಳಿಗೆ ನೌಕರಿ ಲಭಿಸುವ ಏರ್ಪಾಡು ಮಾಡಬೇಕು. ಮತ್ತು ಪ್ರತಿಯೊಬ್ಬ ಕೂಲಿಯವನಿಗೂ ಸಮಂಜಸವಾದ ಕನಿಷ್ಟ ದರದ ಕೂಲಿಯನ್ನು ಕೊಡಬೇಕು ಇತೇ ಮುಂತಾದ ಸಲಹೆಗಳನ್ನಿತ್ತರು.

ಯುದ್ಧ ವಾರ್ತೆ.

ಏಪ್ರಿಲ್ ತಾ. 16.

ಡೆಸ್ಸಿಯು ಹಿಡಿಯಲ್ಪಟ್ಟಿಲ್ಲ.

ಡೆಸ್ಸಿ ನಗರವು ಇಟಲಿಯವರಿಂದ ಹಿಡಿಯಲ್ಪಟ್ಟಿತ್ತೆಂದು ಹೇಳುವ ವಾರ್ತೆಯು ಪೂರ್ತಿ ಸುಳ್ಳೆಂದೂ, ಅಬಿಸೀನಿಯಾ ಸೈನ್ಯವು ಅದನ್ನು ಬಿಟ್ಟು ಓಡಿರುವ ವರ್ತಮಾನವು ನಿಜವಾಗಿದ್ದಲ್ಲವೆಂದೂ, ಅಬಿಸೀನಿಯಾ ಸರಕಾರವು ಪ್ರಕಟಣೆ ಹೊರಡಿಸಿದೆ.

ಇಟಲಿಯವರ ಹೇಳಿಕೆ.

ಇಟಲಿಯ ಸೈನ್ಯಾಧಿಕಾರಿಯೂದ ಮಾರ್ಷಲ್ ಬೊಡೋಗ್ಲಿಯೋರವರು 'ಡೆಸ್ಸಿಯನ್ನು ಇಟಲಿಯವರು ಹಿಡಿದಿರುವರೊ ದೂ, ಇಟಲಿಯ ಮೊದಲನೇ ವಿಮಾನವು ಡೆಸ್ಸಿಯಲ್ಲಿಳಿದಿರುವ ದೆಂದೂ ಪ್ರಕಟಿಸಿರುವರು. ನಿಜಾಂಶವನ್ನವದೆಂದು ದೃಢೀಕರಿಸಲಾಗುವದಿಲ್ಲ.

ನ್ಯೂಗೆಲ್ಲಿ ಬಳಿ ಅಬಿಸೀನಿಯರಿಗೆ ಜಯ.

ನ್ಯೂಗೆಲ್ಲಿ ಎಂಬಲ್ಲಿ ಅಬಿಸೀನಿಯಾ ಸೈನ್ಯವು ಇಟಲಿಯಲಿಡಳದ ಮೇಲೆ ಬಿದ್ದು ಇಟಲಿಯ ಸೈನಿಕರನ್ನು ಬಡೆದೋಡಿಸಿದರಲ್ಲದೆ 12 ಮೆಶಿನ್‌ಗನ್ನುಗಳನ್ನೂ. ಸೈನ್ಯಾಧಿಕಾರಿಯ ಧ್ವಜವನ್ನೂ ಮತ್ತು ಯುದ್ಧ ಸಾಮಗ್ರಿಗಳಿಂದ ತುಂಬಲ್ಪಟ್ಟ ಒಂದು ದೊಡ್ಡ ಲಾರಿಯನ್ನೂ 6 ಬೇರೆ ಲಾರಿಗಳನ್ನೂ ಕೈವಶಪಡಿಸಿಕೊಂಡಿರುವರು. ಆಗ್ಗೆ 321 ಬಿಳಿ ಸೈನಿಕರು ಹತರಾದರು. ಅಬಿಸೀನಿಯಾ ಸೈನ್ಯದಲ್ಲಿ 17 ಮಂದಿ ಹತರಾದರು, ಮತ್ತು 23 ಮಂದಿಗೆ ಜಖಂ ಆಗಿರುವದು ಎಂದು ತಿಳಿಯಲಾಗಿದೆ.

ಏಪ್ರಿಲ್ ತಾ. 17.

ರಾಜಿ ಪ್ರಸಕ್ತಾಪ ಮುರಿಯಿತು.

13 ಮಂದಿಯ ಸಮಿತಿಯವರು ಜಿನೇವಾದಲ್ಲಿ ರಾಜಿ ಸಂಧಾನದ ಪ್ರಸಕ್ತಾಪ ನಡೆಸುತ್ತಿದ್ದರಷ್ಟೆ. ಇಟಲಿಯವರ ಶರತ್ತುಗಳು ತೀರ ಏಪರಿತವಾದ್ದರಿಂದ ಅಬಿಸೀನಿಯರು ಅದಕ್ಕೊಪ್ಪಲಿಲ್ಲ. ಇತ್ತ ಈ ರಾಜಿಪ್ರಸಕ್ತಾಪ ಸಮಿತಿಯವರು ಇಟಲಿಯವರಿಗೆ ತಾತ್ಕಾಲಿಕವಾಗಿ ಯುದ್ಧವನ್ನು ನಿಲ್ಲಿಸ

ಅಬಿಸೀನಿಯದ ಚಕ್ರವರ್ತಿಯವರಾದ ರಾಸ್ ಟಫಾರಿಯವರು.

ಸುಳ್ಳು ವಾರ್ತೆಗಳು.

ಇಷ್ಟರಲ್ಲಿ ಅಬಿಸೀನಿಯೂ ಚಕ್ರವರ್ತಿಗಳು ಕೋಪಿಂ ಬಳಿ ಒಂದು ಕದನದಲ್ಲಿ ಮಡಿದರೆಂದೂ ಅಬಿಸೀನಿಯ ರಾಜಕುಮಾರರು ಇಟೆಲಿಯವರೊಂದಿಗೆ ಸಂಧಿ ಮಾಡಿಕೊಳ್ಳಲು ಸಿದ್ಧರಿರುವರೆಂದೂ ಸುಳ್ಳು ವಾರ್ತೆಗಳು ಪ್ರಬಲವಾಗಿವೆ.

ಏಪ್ರಿಲ್ ತಾ. 19.

ರಾಜಧಾನಿಯಲ್ಲಿ ತಳಮಳ.

ಇಟೆಲಿಯವರು ಧಾಳಿಗೈಯ್ಯುವರೆಂಬ ಭಯದಿಂದ ರಾಜಧಾನಿಯಾದ ಅಡ್ಡೀಸ್ ಅಬಾಬದಲ್ಲಿ ಬಹಳ ಕಳವಳವುಂಟಾಗಿದೆ. ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿವೆ. ದಿನಂಪ್ರತಿ ಅನೇಕ ಸಂಸಾರಿಗಳು ತಮ್ಮ ಸಾಮಾನುಗಳೊಡನೆ ರಾಜಧಾನಿಯಿಂದ ತೊಲಗುತ್ತಿದ್ದಾರೆ. ರಾಜಧಾನಿಯಲ್ಲಿರುವ ವಿದೇಶಿಯರು ತಮ್ಮ ತಮ್ಮ ಸರಕಾರಗಳ ಕಚೇರಿಗಳ ಬಳಿ ಬಂದು ವಾಸವಿದ್ದಾರೆ.

ಜಿಜಿಗಾವು ಹಿಡಿಯಲ್ಪಟ್ಟಿತು.

ಜಿಜಿಗಾ ಪಟ್ಟಣವು ಇಟಲಿಯವರಿಂದ ಹಿಡಿಯಲ್ಪಟ್ಟಿರುವುದಾಗಿ ಪ್ರಬಲವಾದ ವರ್ತಮಾನವು ಬಂದಿದೆ.

ಏಪ್ರಿಲ್ ತಾ. 20.

ಭಯಭೀತರಾಗಿದ್ದಾರೆ.

ರಾಜಧಾನಿಯಲ್ಲಿರುವವರೆಲ್ಲರೂ ಭಯಭೀತರಾಗಿರುವರು. ಬ್ಯಾಂಕುಗಳಿಂದ ಠೇವಣಾತಿಗಳನ್ನು ಎಲ್ಲರೂ ಒಂದೇ ಸವನೆ ತೆಗೆಯುತ್ತಿರುವರು. ಕರೆನ್ಸಿ ನೋಟುಗಳನ್ನು ಕೊಟ್ಟು ಬೆಳ್ಳಿ ನಾಣ್ಯಗಳನ್ನು ಎಲ್ಲರೂ ಕೊಳ್ಳುತ್ತಿರುವರು. ರಾಜಧಾನಿಯ ಬ್ಯಾಂಕಿನಲ್ಲಿ ಒಂದೇ ದಿನದಲ್ಲಿ 25000 ಪೌಂಡುಗಳ ಬೆಲೆಯ ನೋಟುಗಳನ್ನು ನಾಣ್ಯಕ್ಕಾಗಿ ಒದಲು ಮಾಡಿದರು.

ಜಿಜಿಗಾವು ಹಿಡಿಯಲ್ಪಟ್ಟಿಲ್ಲ.

ಜಿಜಿಗಾವು ಹಿಡಿಯಲ್ಪಟ್ಟಿಲ್ಲವೆಂದು ಅಬಿಸೀನಿಯವು ಪ್ರಕಟಿಸಿದೆ.

ಇತೋಪಿಯನಕ ಜಯ.

ಡೆಸ್ಸಿಯ ಉತ್ತರ ಪಾರ್ಶ್ವದಲ್ಲಿ ಇತೋಪಿಯನರು ಇಟಲಿಯವರ ಮೇಲೆ ಬಿದ್ದು ಅವರ ವಿವಾನ ನಿರ್ಮಾಣದೊಳಗೆ ನುಗ್ಗಿ ಅಲ್ಲಿದ್ದ 19 ವಿಮಾನಗಳನ್ನು ಸುಟ್ಟು ಭಸ್ಮ ಮಾಡಿರುವರಾಗಿ ತಿಳಿಯ ಬಂದಿದೆ.

ರಾಜಧಾನಿಯಲ್ಲಿ ಸಮೂಧಾನ.

ಇತೋಪಿಯ ಸರ್ಕಾರದವರು ಎಲ್ಲಾ ಕಡೆಗಳಿಂದಲೂ ವರ್ತಮಾನಗಳನ್ನು ಬರಮಾಡಿಕೊಂಡು ರಾಜಧಾನಿಯಿಂದ ನೂರು ಮೈಲುಗಳಿಗಿಂತ ಎಷ್ಟೋ ದೂರದಲ್ಲಿ ಇಟೆಲಿಯ ಸೈನ್ಯಗಳಿವೆ ಎಂಬದನ್ನು ಶ್ರುತಪಡಿಸಿರುವರು. ಈ ಬಗ್ಗೆ ಜನಗಳಲ್ಲಿ ಸಮೂಧಾನ ಪಡಿಸಲು ನೋಟೀಸುಗಳನ್ನು ರಾಜಧಾನಿಯಲ್ಲಿ ಹಚ್ಚಿರುವರು. ರಾಜಧಾನಿಯಲ್ಲಿ ಈಗ ಸಮೂಧಾನವಿದೆ.

ಇಟೆಲಿಯ ಸರ್ವಾಧಿಕಾರಿ ಮುಸ್ಸೊಲೆನಿಯವರು.

ರೋಮಿನ ಜನ್ಮ ದಿನೋತ್ಸವ.

ತಾ. 21ಕ್ಕೆ ರೋಮ್ ನಗರದ ಜನ್ಮೋತ್ಸವದ ಆಚರಣೆಯು ರೋಮ್ ನಗರದಲ್ಲಿ ವಿಜೃಂಭಣೆಯಿಂದ ನಡೆಯಿತು. ಆ ಸಮಯದಲ್ಲಿ ಮುಸೋಲಿನಿಯವರು 100,000 ಜನರ ಪ್ರಚಂಡ ಕೂಟಕ್ಕೆ ಉತ್ಸಾಹಭರಿತವಾದ ಭಾಷಣ ಮಾಡಿದರು 'ಅನೇಕ ದಿವಸಗಳ ಕಷ್ಟ ತರಿಸಿ ಸಮುದ್ರ ಪ್ರಯಾಣದನಂತರ ಈಗ ದಡವನ್ನು ಕಾಣ ಹತ್ತಿರುವೆವು.' ಎಂದು ಘೋಷಿಸಿದರು.

ಏಪ್ರಿಲ್ ತಾ. 22.

ರಾಜಕುಮಾರರು ಹಿಂತಿರುಗಿದರು.

ಇತೋಪಿಯದ ಯುವರಾಜ ಕುಮಾರರು ಡೆಸ್ಸಿಯಿಂದ ರಾಜಧಾನಿಗೆ ಹಿಂತಿರುಗಿ ಬಂದಿರುವರು. ಅವರು ರಾಜಧಾನಿಯನ್ನು ಶತ್ರುಗಳಿಂದ ರಕ್ಷಿಸುವ ಸಕಲ ಜವಾಬ್ದಾರಿಯನ್ನು ವಹಿಸಿರುವರು. ಅವರ ಹೇಳಿಕೆಯಂತೆ ಇಟೆಲಿಯ ಸೈನ್ಯವು ಬೇಗನೆ ರಾಜಧಾನಿಯ ಮೇಲೆ ಧಾಳಿ ಮಾಡುವುದೆಂದು ತಿಳಿಯಲಾಗಿದೆ.

ಇತೋಪಿಯನರ ಪ್ರಯತ್ನ.

ಇತೋಪಿಯನರು ಈಗ ಅಡಿಸ್ಅಬಾಬ—ಡೆಸ್ಸಿ ರಸ್ತೆಯನ್ನು ತುಂಡುಮಾಡಿ ಇಟೆಲಿಯವರಿಗೆ ಅಡಿಸ್ಅಬಾಬಕ್ಕೆ ಬರಲು ಕಡೆಮಾಡುತ್ತಿರುವರು. ಬೆಟ್ಟಗಳಿಂದ ಹರಿದುಬರುವ ನದಿಗಳನ್ನು ತಿರುಗಿಸಿ ರಸ್ತೆಗಳ ಮೇಲೆ ಹರಿಯುವಂತೆ ಮಾಡಿ ರಸ್ತೆಗಳನ್ನು ವಹಿವಾಟಿಗೆ ಅಸಾಧ್ಯವಾಗುವಂತೆ ಮಾಡಿರುವರು.

ದಕ್ಷಿಣದಲ್ಲಿ ಭಾರೀ ಮಳೆ

ದಕ್ಷಿಣದಲ್ಲಿ ಮಳೆಯು ಪ್ರಾರಂಭವಾಗಿದೆಂದೂ ನದಿಗಳೆಲ್ಲವೂ ಪ್ರವಾಹದಿಂದ ಕೂಡಿದೆಯೆಂದೂ ತಿಳಿದು ಬಂದಿದೆ.

ತಿಂಗಳೊಂದರ 9 ಮಿಲಿಯ ವೆಚ್ಚ.

ಇಟಲಿಗೆ ಪ್ರತಿ ತಿಂಗಳೊಂದಕ್ಕೆ ಯುದ್ಧಕ್ಕಾಗಿ ಒಂಭತ್ತು ಮಿಲಿಯ ಪೌಂಡುಗಳಷ್ಟು ವೆಚ್ಚವಾಗುತ್ತದೆಯಂತೆ

"501 ಮೂರ್ತಿನ ಸಾಬೂನನ್ನು ಉಪಯೋಗಿಸತೊಡಗಿದಂದಿನಿಂದ ಬಟ್ಟೆ ಒಗೆಯುವ ದಿನಗಳು ಅನಾಯಾಸವಾಗಿವೆ."

ವೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಮೆ!

ಟಾಮ್‌ಕೋ ಮೂರಾಟದ ಮಳಿಗೆ,

TOMCO ೧, ಸೌತ್ಪಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52-48 ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ರಚನೆ.

ಕಾಂಗ್ರೆಸ್ಸಿನ ಹೊಸ ಅಧ್ಯಕ್ಷರು ತಮಗೆ ಬೇಕಾದವರನ್ನು ಆರಿಸಿಕೊಂಡು ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ರಚಿಸುವುದು ಪದ್ಧತಿ. ಈ ಸಾರಿ ಅಧ್ಯಕ್ಷರಾದ ಪಂಡಿತ ಜವಾಹರಲಾಲರು ಕಾಂಗ್ರೆಸ್ಸಿನಲ್ಲಿರುವ ಸಮಸ್ತ ಭಿನ್ನ ಪ್ರಕೃತಿಗಳಿಗೂ ಸರಿಯಾದ ಪ್ರಾತಿನಿಧ್ಯವನ್ನು ಕೊಡುವಂತೆ ಸದಸ್ಯರನ್ನು ಆರಿಸಿಕೊಂಡಿದ್ದಾರೆ. ಆದುದರಿಂದ ಹಳಬರು ಕೆಲವರು ಹೊಸಬರು ಸೇರಿದ್ದಾರೆ

ಈ ವರ್ಷದ ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಸದಸ್ಯರಿವರು—ಪಂಡಿತ ಜವಾಹರಲಾಲರು ಅಧ್ಯಕ್ಷರು. ಇತರರು ಯಾರು ಯಾರೆಂದರೆ:—

(1) ಶ್ರೀ ಜವಾಹರಲಾಲ್ ಬಜಾಜ್ (ಖಜಾಂಚಿ), (2) ಆಚಾರ್ಯ ಜೆ. ಬಿ ಕೃಪಾಲಿನಿ (ಕಾರ್ಯದರ್ಶಿ) (3) ಮೌಲಾನಾ ಅಬ್ದುಲ್ ಕಲಾಂ ಆಜಾದ್ (ಬಂಗಾಳ), (4) ಬಾಬು ಬ್ರಜಕಿಶೋರ್ ಪ್ರಸಾದ್ (ಬಿಹಾರ್), (5) ಸರ್ದಾರ್ ವಲ್ಲಭಭಾಯಿ ಪಟೇಲ್ (ಗುಜರಾತ್), (6) ಖಾನ್ ಅಬ್ದುಲ್ ಗಫೂರ್‌ಖಾನ್ (ಗಡಿನಾಡು), (7) ಶ್ರೀ ಸಿ ರಾಜಗೋಪಾಲಾಚಾರಿ (ಮದ್ರಾಸು), (8) ಶ್ರೀ ಸಭಾಷ್ಚಂದ್ರಬೋಸ್ (ಬಂಗಾಳ), (9) ಶ್ರೀ ಒಯರಾಮುದಾಸ್ ದಿವುಲ್‌ಕರ್ (ಬಂಧ್), (10) ಶ್ರೀ. ಎಸ್. ಡಿ. ದಿಯೋ (ಸೋಷಲಿಸ್ಟ್) (11) ಶ್ರೀ. ಜಯಪ್ರಕಾಶ ನಾರಾಯಣ್ (ಸೋಷಲಿಸ್ಟ್) (12) ಶ್ರೀ ಬುಲಭಾಯಿ ದೇಸಾಯಿ (ಪಾರ್ಲಿಮೆಂಟರಿ) (13) ಶ್ರೀ ನರೇಂದ್ರ ದೇವ (ಸೋಷಲಿಸ್ಟ್), (14) ಶ್ರೀ ಅಚ್ಯುತ್ ಪಟ್ವರ್ಧನ್ (ಸೋಷಲಿಸ್ಟ್).

ಕಳೆದ ವರ್ಷದ ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಅಧ್ಯಕ್ಷರು ಬಾಬು ರಾಜೇಂದ್ರ ಪ್ರಸಾದರಾಗಿದ್ದರು. ಸದಸ್ಯರಿವರು: ಸೇಟ್ ಜಮುನಾಲಾಲ್ ಬಜಾಜ್, ಆಚಾರ್ಯ ಕೃಪಾಲಿನಿ, ಅಬ್ದುಲ್ ಕಲಂ ಆಜಾದ್, ಸರ್ದಾರ್ ಪಟೇಲ್, ಅಬ್ದುಲ್ ಗಫೂರ್‌ಖಾನ್, ಸಿ. ರಾಜಗೋಪಾಲಾಚಾರಿ, ಜಮುನಾದಾಸ್. ದಾಲತ್‌ರಾಂ, ಡಾ ಪಟ್ಟಾಭಿ ಸೀತಾರಾಮಯ್ಯ, ಶ್ರೀಮತಿ ಸರೋಜಿನಿ ನಾಯ್ಡು, ಗಂಗಾಧರರಾವ್ ದೇಶಪಾಂಡೆ, ಕೆ. ಎಫ್. ನಾರಿಮನ್, ಡಾ. ಸಯ್ಯದ್ ಮಹ್ಮದ್, ಶಾರ್ದೂಲ್ ಸಿಂಗ್, ಡಾ. ಅನ್ಸಾರಿ, ಪಂಡಿತ ನೆಹರು.

ಹೊಸತಾಗಿ ರಚಿತವಾದ ವರ್ಕಿಂಗ್ ಸಮಿತಿಯ ಮುಂದಿನ 27ನೇಯ ತಾರೀಕು ಮಧ್ಯಾಹ್ನ ಮೂರು ಗಂಟೆಗೆ ವಾರ್ಧಾ ನಗರದಲ್ಲಿ ಸೇರುತ್ತದೆ

ಕಾಂಗ್ರೆಸ್ ಕಾರ್ಯದರ್ಶಿಯವರ ಲಗ್ನ.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಕಾರ್ಯದರ್ಶಿಯವರಾದ ಶ್ರೀ ಕೃಪಾಲಿನಿಯವರು ತಾ. 20ರಲ್ಲಿ ಅಲಹಾಬಾದಿನಲ್ಲಿ 'ಆನಂದಭವನದಲ್ಲು' ಶ್ರೀಮತಿ ಸುಚೇತ ಮೂಮುಂದಾರ್ ಎಂ. ಎ ಎಂಬವರನ್ನು ವಿವಾಹವಾದರು. ವಿವಾಹ ಸಮಾರಂಭದಲ್ಲಿ ಅನೇಕ ರಾಷ್ಟ್ರ ಮುಖಂಡರೂ ಶ್ರೀ. ಪಂ ಜವಾಹರಲಾಲರೂ ಇದ್ದರು.

ಪ್ರಕಟಣೆ.

ನನ್ನ ಬಾಬ್ತು ಈ ಕೆಳಗೆ ಕಾಣಿಸಿದ ಜೇಬಿನ ಎರಡು ಕೋಣಗಳು ಪರಾರಿಯಾಗಿರುತ್ತವೆ ಇವುಗಳನ್ನು ಪತ್ತೆ ಮಾಡಿ ಕೊಟ್ಟವರಲ್ಲು ಅವರಿಗೆ ಎರಡು ರೂಪಾಯಿ ಇನಾಮು ಕೊಡುತ್ತೇನೆ.

(1) ಬೀಜ ಒಡೆದ ಬಾಯಿ ಕೂಡಿದ ಸುಮಾರು 3½ ಅಡಿ ಎತ್ತರ ಇರುವ ಬಿಳೀ ಕೋಣ ಒಂದು.

(2) ಬೀಜ ಒಡೆಯದ ಆರು ಹಲ್ಲಿನ ಸುಮಾರು 3½ ಅಡಿ ಎತ್ತರ ಇರುವ ಕರೀ ಕೋಣ ಒಂದು.

ಕೋಡಿರ ಅಯ್ಯಪ್ಪ,
ಫ್ರೇಜರ್‌ಪೇಟೆ, ಅನಿಕಾಡು.

WANTED.

Wanted agents to popularise HOUSE PURCHASE, MORTGAGE LOAN and TEN RUPEES DEBENTURE (Life & Marriage) SCHEMES. For Particulars and Prospectuses apply to—

The Premier Insurance and Building Society Madras Ltd.

Or Our Special Agent—

Mr. G, Nagiah Naidu,
C/o P. Vijayaratnam Mudaliar.
P. W. D. Office,
3—1 Mereara (Coorg),

ವಿಜ್ಞಾಪನೆ.

ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಜಮ್ಮ ಓಟರುಗಳಲ್ಲಿ ಪಿ. ಜಿ. ಮುದ್ದಮ್ಮಯ್ಯನ ವಿಜ್ಞಾಪನೆ.

ಈಗ ತಾನೇ ನಮ್ಮ ಕೌನ್ಸಿಲ್‌ನಲ್ಲಿ ಖಾಲಿ ಬಿದ್ದಿರುವ ಒಂದು ಸ್ಥಳಕ್ಕೆ ನಮ್ಮ ತಾಲೋಕಿನ ಪರವಾಗಿ ನಾನೊಬ್ಬ ಉಮೇದ್ವಾರನಾಗಿರುತ್ತೇನೆ. ಸದರಿ ಸ್ಥಳಕ್ಕೆ ತಾವುಗಳೆಲ್ಲರು ತಾರೀಕು 15—5—36 ನೇ ಶುಕ್ರವಾರ ದಿನ ನಿಮ್ಮ ನಿಮ್ಮ ವೋಟಿಂಗ್ ಸ್ಟೇಶನಿಗೆ ದಯಮಾಡಿಸಿ ಒಮ್ಮನಸ್ಸಿನಿಂದ ತಮ್ಮ ದೊಂದು ಓಟನ್ನು ನನಗೆ ಕೊಟ್ಟು ನನ್ನನ್ನು ಜಯಶೀಲನಾಗಿ ಮಾಡಿ ತಮ್ಮೆಲ್ಲರ ಸೇವೆ ಮಾಡಲು ಅನುಕೂಲಪಡಿಸಿಕೊಡ ಬೇಕಾಗಿ ವಿನಯಪೂರ್ವಕವಾಗಿ ಬೇಡುತ್ತೇನೆ.

ಪೊನ್ನಂಪೇಟೆ, ಇಂತಿ ತಮ್ಮ ಸೇವಕ,
4—4—36. **ಪಿ. ಜಿ ಮುದ್ದಮ್ಮಯ್ಯ.**

ಪತ್ರವ್ಯವಹಾರ.

[ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ದೇಶೀಯರಿಗೆ ಉತ್ತೇಜನವೆಲ್ಲಿ?

ಮಾನ್ಯರೇ,

ಯಾವ ದೇಶದಲ್ಲೇ ಆಗಲೀ ಅಲ್ಲಿಯವರಿಗೂ, ಹೊರಗಿನವರಿಗೂ ಯಾವ ಕೆಲಸಕಲ್ಲಾಗಲಿ ಪೈಪೋಟಿ ಉಂಟಾದಲ್ಲಿ ಸ್ಥಳೀಕರಿಗೇನೇ ಉತ್ತೇಜನಕೊಡುವಂಥಾದ್ದು ಅಲ್ಲಿಯ ಜನದ ಮತ್ತು ಸರ್ಕಾರದವರ ಧರ್ಮವಾಗಿದೆ. ದೊಡ್ಡ ದೊಡ್ಡ ಮುಂಬಯಿರಿಡ ದೇಶಗಳಲ್ಲೆಲ್ಲಾ ಹೀಗಿರುವಾಗ್ಯೆ ನಮ್ಮ ಪುಟ್ಟ ಪ್ರಾಂತ್ಯದಲ್ಲಿ ಅದರಲ್ಲೂ ವ್ಯಾಪಾರದಲ್ಲಿ ಬಹು ಹಿಂದೆ ಬಿದ್ದಿರುವ ಇಲ್ಲಿಯ ನಿವಾಸಿಗಳಿಗೆ ತುಂಬಾ ಪ್ರೋತ್ಸಾಹ ಮತ್ತು ಭದ್ರತೆಗಳನ್ನು ಕೊಡುವುದು ಅತ್ಯಗತ್ಯವಾಗಿದೆ. ಅದರ ಒದಲು ಇಲ್ಲಿ ನಡೆಯುತ್ತಿರುವ ಕೃತ್ಯಗಳೇನೆಂದು ಸ್ವಲ್ಪ ವಿಚಾರಿಸುವ.

ನಮ್ಮ ದೇಶೀಯರು ಇತ್ತಲಾಗಿ ಕೈಹಾಕಿರುವ ವ್ಯಾಪಾರವೊಂದು ಬಸ್ಸ್ ಸರ್ವಿಸಾಗಿದೆ. ದೇಶೀಯ ಕಂಪೆನಿಗಳೊಳಗೆ ಪೈಪೋಟಿ ನಡೆಯುತ್ತಿರುವದು ಮತ್ತು ನಡೆಯಬೇಕಾದದ್ದು ಸಹಜ. ಆದರೆ ಹೊರಗಿನವರು ಬಂದು ಪೈಪೋಟಿ ನಡಿಸಿ ಇಲ್ಲಿಯವರ ಸರ್ವಿಸುಗಳನ್ನು ಮುಳುಗೆಗೊತ್ತುತ್ತಿರುವುದು ಏಷಾದಕರ. ಉದಾಹರಣೆಗಾಗಿ ಮಡಿಕೇರಿ—ಕೊಡ್ಲಿಪೇಟೆ ಲೈನನ್ನು ತೆಗೆದುಕೊಳ್ಳುವ. ಈ ಲೈನಿನಲ್ಲಿ ಸೋಮವಾರಪೇಟೆಯ ವರೆಗೆ ಫ್ರೇಜರ್‌ಪೇಟೆಗಾಗಿಯೂ, ಮೂರ್ನಾಡುರಕ್ಕಾಗಿಯೂ ಹಲವು ಬಸ್ಸ್ ಸರ್ವಿಸುಗಳು ಓಡ್ಯಾಡುತ್ತಿವೆ. ಪ್ರಯಾಣೀಕರ ತಿರುಗಾಟವೂ ಹಾಗೆಯೇ ಹೆಚ್ಚಾಗಿದೆ. ಆದರೆ ಸೋಮವಾರಪೇಟೆಯಿಂದ ಕೊಡ್ಲಿಪೇಟೆಗೆ ವೈವಾಟು ಬಹು ಕಡಿಮೆ. ಆದರೂ ಕೂಡ ಅಲ್ಲಿ ಎರಡು ದೇಶೀಯ ಬಸ್ಸ್ ಸರ್ವಿಸುಗಳು ನಡೆಯುತ್ತಿವೆ. ಅವರೊಳಗೆ ಪೈಪೋಟಿಯೂ ಇದೆ. ಅದರೆ ಇವರ ಮಧ್ಯೆ ಹೊರಗಿನ ಸರ್ವಿಸ್ಸೊಂದು ಬಂದು ಯತ್ನಿಸುತ್ತಿದ್ದಯಂತೆ. ಅದೇ ಸಿ. ಸಿ. ಸಿ. ಕಂಪೆನಿಯ ಸರ್ವಿಸು. ಇದೊಂದು ದೊಡ್ಡ ಕಂಪೆನಿ. ಇವಕ್ಕೆ ಲೈಸೆನ್ಸು ಕೊಟ್ಟರೆ ಇದು ಪೈಪೋಟಿ ನಡಿಸಿ ದೇಶೀಯ ಸರ್ವಿಸುಗಳನ್ನು ಮುಳುಗೆಗೊತ್ತದೆ ಇರದು. ಸ್ವಲ್ಪ ದಿವಸಗಳ ಮಟ್ಟಿಗೆ ಅತಿ ಕಡಿಮೆ ಚಾರ್ಜನ್ನಿಲ್ಲಿ ನಡಿಸುವ ಶಕ್ತಿಗೆ ಈ ಕಂಪೆನಿಗೆ ಇದೆ. ಆದುದರಿಂದ ಚಿಕ್ಕ ಸರ್ವಿಸುಗಳಿಗೆ ದೊಡ್ಡ ಕಂಪೆನಿಯೊಂದಿಗೆ ಸ್ಪರ್ಧೆ ನಡಿಸಲು ಸಾಧ್ಯವಿಲ್ಲ. ಸಂಣ ಸರ್ವಿಸುಗಳನ್ನು ಮುರಿದ ಮೇಲೆ ದೊಡ್ಡ ಸರ್ವಿಸಿನ ಮನಸೋ ಇಚ್ಛೆ ನಡಿಸಲು ಅವಕಾಶ ಕೊಟ್ಟಯಂತಾಗುವುದು. ಅದಕಲ್ಲೂ ಸರ್ಕಾರದವರು ಅತಿ ಕಡಿಮೆ ದರವನ್ನು ನಿರಿಖು ಮಾಡದೆ ಇರುವುದರಿಂದ ಸಂಣ ಸರ್ವಿಸುಗಳಿಗೆ ಉಳಿಗಾಲವೇ ಇಲ್ಲದಾಗುವುದು. ಆದ ಕಾರಣ ದೇಶೀಯ ಸರ್ವಿಸುಗಳಿಗೆ ಅಧಿಕಾರಿಗಳು ರಕ್ಷಣೆಯನ್ನು ಕೊಡಬೇಕಾಗಿದೆ. ಆದುದರಿಂದ ಈಗಿನ ಸ್ಥಿತಿಯಲ್ಲಿ ದೇಶೀಯರೊಳಗೆ ಪೈಪೋಟಿ ಇರುವ ಮಡಿಕೇರಿ—ಕೊಡ್ಲಿಪೇಟೆ ಲೈನಿನಲ್ಲಿ ಹೊರಗಿನ ದೊಡ್ಡ ಕಂಪೆನಿಗೆ ಹೊಸದಾಗಿ ಲೈಸೆನ್ಸು ಕೊಟ್ಟರೆ ಅಲ್ಲಿಯ ದೇಶೀಯ ಸರ್ವಿಸುಗಳು ನಾಶ ಹೊಂದುವುದರಲ್ಲಿ ಸಂಶಯವಿಲ್ಲ. ಅಂದ ಮೇಲೆ ಸರ್ಕಾರದವರು ದೇಶೀಯರಿಗೆ ಕೊಡುವ ಉತ್ತೇಜನ ಮತ್ತು ರಕ್ಷಣೆ ಏನು? ಅಧಿಕಾರಿಗಳು ಇದಕ್ಕೆ ಗಮನಕೊಡುವರೇ?

'ದೇಶೀಯ.'

ಬಸ್ಸ್ ಸರ್ವಿಸುಗಳ 'ಕಾಂಬಿನೇಶನ್'ನ ಫಲಿತಾಂಶ.

ಅಯ್ಯಾ,

ನಾನೊಬ್ಬ ಆಗಾಗ್ಯೆ ಬಸ್ಸಿನಲ್ಲಿ ಪ್ರಯಾಣಮಾಡುವವ. 'ಆದಿ ಕಾವೇರಿ ಬಸ್ಸ್ ಸರ್ವಿಸಿನವರು ನಮ್ಮವರು; ನಮ್ಮ ದೇಶದ ಸರ್ವೀಸು, ಇವರಿಗೆ ಉತ್ತೇಜನಕೊಡಬೇಕು. ಇವರ ಬಸ್ಸುಗಳಲ್ಲೇ ಪ್ರಯಾಣಮಾಡಬೇಕು' ಎಂದು ಎಲ್ಲೆಲ್ಲೂ ಕೋಲಾಹಲ. ಅಂತು ನಮ್ಮ ದೇಶದವರ ಸರ್ವೀಸು ಅಲ್ಲವೇ ಎಂದು ಯೋಚಿಸಿ, ನಾನೂ ಹಲವರಂತೆ ಈ ಬಸ್ಸ್ ಸರ್ವಿಸಿನಲ್ಲೇ ಪ್ರಯಾಣ ಮಾಡುತ್ತಾ ಒಂದನು. ಹೀಗೆ ಮಾಡಿದುದರಿಂದ ಬೇರೆ ಸರ್ವಿಸುಗಳ ನಿಷ್ಕಾರಕ್ಕೆ ಗುರಿಯಾಗಲೂ ಬೇಕಾಯಿತು. ಈಗ ಮಡಿಕೇರಿಯಿಂದ ವೀರಾಜಪೇಟೆ ಕಡೆಗೆ ಲೈನುಗಳ ಬಸ್ಸ್ ಸರ್ವಿಸುಗಳು 'ಕಂಬೈನ್' ಆದ ಮೇಲೆ ಪೈಪೋಟಿ ನಿಂತಿದ್ದು ಬಸ್ಸ್ ಸರ್ವಿಸಿನವರು ಒಂದಾಗಿ ಪರಮ ಸ್ನೇಹಿತರಾಗಿರುವರು. ಆದರೆ ನನ್ನಂಥ ಪ್ರಯಾಣೀಕರು ಮಾತ್ರ ಯಾವ ಸರ್ವಿಸಿನವಕ ಪ್ರೀತಿಯೂ ಇಲ್ಲದೆ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಿರುವರು.

ಬಸ್ಸ್ ಸರ್ವಿಸುಗಳು 'ಕಂಬೈನ್' ಆಗದೆ ಇರುವಾಗ ಪ್ರಯಾಣೀಕರಿಗೆ ಹಲವು ತರದ ಕಷ್ಟ ನಷ್ಟಗಳುಂಟಾಗುವವೆಂಬ ಸ್ಥಳೀಯ ಪತ್ರಿಕೆಗಳಲ್ಲಿ ಕೆಲವು ಸಮಯದ ಹಿಂದೆ ಬರೆಡಿದ್ದು ನೋಡಿದ್ದೆನು. ಆದರೆ ಆಗ್ಯೆ ಅವುಗಳು ಎಷ್ಟರ ಮಟ್ಟಿಗೆ ನಿಜವೆಂದು ನನಗೆ ತಿಳಿಯಲಿಲ್ಲ. ಈಗ ಅವುಗಳಲ್ಲಿ ಒಂದೊಂದಾಗಿ ನಮ್ಮ ಅನುಭವಕ್ಕೆ ಒರುತ್ತಿವೆ.

ಮಡಿಕೇರಿ—ಮೂರ್ನಾಡು—ವೀರಾಜಪೇಟೆ ಸರ್ವಿಸಿನ ದರಗಳನ್ನು ನೋಡುವ. ಕಾಂಬಿನೇಶನಿಗೆ ಮುಂಚೆ ಮಡಿಕೇರಿಯಿಂದ ವೀರಾಜಪೇಟೆಗೆ ಮೂರ್ನಾಡಿಗಾಗಿ 0—8—0, ನಂತರ 0—12—0 ಚಾರ್ಜು ಇತ್ತು. ಆ ಮೇಲೆ ಮೆಲ್ಲಗೆ 0—14—0 ಆಣೆಗೆ ಏರಿಸಿದರು. ಈಗ 15 ನೇ ತಾರೀಕಿನಿಂದ 1—0—0 ಯಂಬೆ! ಅಲ್ಲದೆ ಅವರ ಪ್ರಕ್ಷನಾತಕನ್ನು ನೋಡಿರಿ ಮಡಿಕೇರಿಯಿಂದ ಮೂರ್ನಾಡಿಗೆ 0—6—0 ಮೂರ್ನಾಡಿನಿಂದ ವೀರಾಜಪೇಟೆಗೆ 0—10—0. ಕಾರಣ ತಿಳಿಯಲು ಕಷ್ಟವಿಲ್ಲ. ಮಡಿಕೇರಿಯಿಂದ ನಾಪೋಕ್ಲಿಗೂ ಭಾಗಮಂಡಲ್ಕಕ್ಕೂ ಹೋಗಲು ಇನ್ನೆರಡು ಬಸ್ಸುಗಳಿವೆ ಇದ್ದರಿಂದ 0—6—0; ಮೂರ್ನಾಡಿನಿಂದ ವೀರಾಜಪೇಟೆಗೆ ಇಷ್ಟೇ ದೂರಕ್ಕೆ 0—10—0 ಚಾರ್ಜು. ಇದು ಯಾವ ನ್ಯಾಯ. ಮೂರ್ನಾಡಿನಿಂದ ವೀರಾಜಪೇಟೆಗೆ ಅವರ ರೇಟುಗಳನ್ನು ನೋಡಿದರೆ ವಿಷಾದಕರ. ಮೂರ್ನಾಡಿನಿಂದ 2½ ಮೈಲು ದೂರ ಬೇತರಿಗೆ 0—2—0, ಬೇತರಿನಿಂದ ಒಂದು ಮೈಲಿ ದೂರವಿರುವ ಹೆಮ್ಮಾಡ್ ರೋಡಿಗೆ 0—2—0, ಹೆಮ್ಮಾಡ್ ರೋಡಿನಿಂದ ಒಂದೂವರೆ ಮೈಲು ದೂರವಿರುವ ಕಾಕೋಟುಪರಂಬಿಗೆ 0—2—0, ಕಾಕೋಟುಪರಂಬಿನಿಂದ ಒಂದು ಮೈಲು ಜೂರಿದ ಮಲ್ಲಂಬಟ್ಟಿಗೆ 0—1—0 ಮಲ್ಲಂಬಟ್ಟಿಯಿಂದ ಒಂಬತ್ತು ಮೈಲು ದೂರದ ಶದನೂರಿಗೆ 0-2-0, ಶದನೂರಿನಿಂದ ಸಾಧ 2½ ಮೈಲು ಇರುವ ವೀರಾಜಪೇಟೆಗೆ 0—1—0; ಕೆಲವು ಕಡೆ ಮೈಲಿಗೆ ಬಂದಾಣಿಗಿಂತ ಹೆಚ್ಚು! ಇದ್ದೀ ಯಾವ ಕಾಕತಾಳೀಯ ನ್ಯಾಯ, ವೀರಾಜಪೇಟೆಗೆ ಮೂರ್ನಾಡಿನಿಂದ ಇನ್ನಿತರ ಸರ್ವೀಸುಗಳಿಲ್ಲದೆ ಇರುವುದರಿಂದ ಅದಿಕಾರಿವರ್ಗದವರು ತಮ್ಮ ಮನಸ್ಸು ಬಂದಂತೆ ರೇಟನ್ನು ಹೆಚ್ಚಿಸುವುದಕ್ಕೆ ಅವಕಾಶವಾಯಿತು. ಮಳೆಗಾಲ ಸುರುವಾದೊಡನೆಯೇ ಮಡಿಕೇರಿಗೆ ಮೂರ್ನಾಡಿನಿಂದ 10 ಆಣೆ ಆಗಬಹುದು. ಮೂರ್ನಾಡಿಗೆ ಹೋಗುವ ಇನ್ನೆರಡು ಸರ್ವೀಸುಗಳು ನಡೆಸುವುದಿಲ್ಲವಾದ ಕಾರಣ ಖಂಡಿತ ಹಾಗೆ ಮಾಡಬಹುದು. ಇಂಥ ದುಃಸ್ಥಿತಿಯ ದಿನಗಳಲ್ಲಿ ನಮ್ಮವರು ನಮಗೆ ಮಾಡುವ ಉಪಕಾರವೇ ಇದು. ಮಡಿಕೇರಿಯಿಂದ 75 ಮೈಲು ದೂರವಿರುವ ಮೈಸೂರು, ಮಲಬಾರು ಪ್ರಾಂತ್ಯಗಳಿಗೆ ಮೈಲಿಗೆ ಆರು ಕಾಸಿಗಿಂತ ಕಮ್ಮಿ ದರಲ್ಲಿ ಬಸ್ಸುಗಳು ಓಡುತ್ತಿರುವಾಗ ನಮ್ಮ ಸರ್ವೀಸಿನವರು ನಮಗೆ ಎಷ್ಟರ ಮಟ್ಟಿಗೆ ಉಪಕಾರ ಮಾಡುತ್ತಿರುವರು, ಮೈಸೂರಿನಲ್ಲಿ ಅರ್ಧಾಣೆಗಿಂತ ಹೆಚ್ಚಾಗಿ ತೆಗೆದುಕೊಳ್ಳಕೂಡದೆಂಬ ನಿಬಂಧನೆಯಿದೆಯಂತೆ. ನಮ್ಮ ಘನ ಸರಕಾರವು ಪ್ರಯಾಣೀಕರ ಪ್ರಯೋಜನಕ್ಕಾಗಿ ಇಂಥ ಖಂಡನೂ ಮಾಡುವ ಇರುವುದು ಏಷಾದಕರ. ಇಲ್ಲವಾದರೆ ಮೂರ್ನಾಡಿನಿಂದ ಇತರರಿಗೆ ಬಸ್ಸು ಓಡಿಸಲು ಅಸ್ಪಣೆಯಾದರೂ ಕೊಟ್ಟರೆ ಪೈಪೋಟಿಯಿಂದ ಬಸ್ಸಿನ ದರಗಳನ್ನು ಕಡಮೆ ಮಾಡಲು ಅನುಕೂಲ ಕಲ್ಪಿಸಿಕೊಟ್ಟಂತಾಗುವುದಿಲ್ಲವೇ? ಮೂರ್ನಾಡಿನಿಂದ ವೀರಾಜಪೇಟೆಗೆ ಹೋಗಲು ಈಗ ನಾಪೋಕ್ಲು ಮತ್ತು ಭಾಗಮಂಡಲ್ಕಕ್ಕೆ ಹೋಗುವ ಬಸ್ಸುಗಳಿಗೆ ಅಸ್ಪಣೆ ದೊರತರೆ ಅವರು ನಿತ್ಯ ಓಡಿಸಲು ಅನುಕೂಲವಾಗುತ್ತೆ. ಆದುದರಿಂದ ಸರಕಾರದವರು, ಇದಕ್ಕೆ ಅನುಕೂಲತೆ ಖಂಡಿತ ಕಲ್ಪಿಸಿಕೊಡುವರಾಗಿ ಕೋರುವ.

'ಬಸ್ಸಿನ ಪ್ರಯಾಣಿಕ.'

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ವಿಜ್ಞಾಯನ್ಸ್‌ರರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ಜೀರ್ಣಾಶಯ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯನ್ನು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನಿಗೆ ರೂ. 1.

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾತಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೊದಿರಿ.

ಆತಂಕನಿಗ್ರಹ ಫಾರ್ಮಸಿಕಲ್, ಜಿಕ್ಕಜೋಡಿಚಾರ್ಲ,
52—4 ಬೆಂಗಳೂರು ಸಿಟಿ.

ಪ್ರಕಟಣೆ.

Repairing chairs, easy chairs, cane chairs, cots etc. in rattan will be done in singles, doubles and diamond at moderate charges.

ಬೆತ್ತದ ಕುರ್ಚಿ, ಆರಾಮು ಕುರ್ಚಿ ಮತ್ತು ಮಂಚ ವ ಎತಾರುವುಗಳನ್ನು ತೃಪ್ತಿಕರವಾಗಿ ಅತಿ ಸುಲಭ ಚಾರ್ಜಿನಲ್ಲಿ ಬೆತ್ತದಿಂದ ಮಾಡಲಾಗುವುದು.

Apply to:—

P. S. RAMAPPA,
Rattan Works,
MecDowell & Co., Buildings,
4—3 Mercara.

FOR SALE.

80 Acres of good Jungle fit for orange, or coffee cultivation and 330 Batties of wet-land near Gattadalla & Silpi estates in Karadigode Village. Intending purchasers may write to the below address.

ಮಾರಾಟಕ್ಕಿದೆ.

ಸಿದ್ದಾಪುರ ಕರಡಿಗೋಡು ಗ್ರಾಮದಲ್ಲಿ ಗಟ್ಟದಳ್ಳ ಮತ್ತು ಸಿಲ್ಪಿ ತೋಟದ 80 ಏಕರು ಕಾಡು ಮತ್ತು 330 ಬಟಿ ಸಾಗುವಳಿ ಗದ್ದೆ ಮಾರಾಟಕ್ಕಿದೆ. ಕಾಡು ಕಾಫಿ, ಕಿತ್ತಳೆ ವ್ಯವಸಾಯಕ್ಕೆ ಬಹಳ ಉತ್ಪನ್ನವಾಗಿದೆ. ಗದ್ದೆ ಮೇಲ್ಗಡೆ ಕೆರೆಯಿದೆ. ಸದಾ ನೀರಿರುವು. ಖರೀದಿದಾರರು ಒಡನೆ ಈ ವಿಳಾಸದವರನ್ನು ಪತ್ರದ್ವಾರ ಯಾ ಖುದ್ದಾಗಿ ತಮ್ಮ ಇರಾದೆ ತಿಳಿಸಬಹುದು.

ಕೆ. ಕೆ. ನಾಜುಂಡ,
4—3 ಕರಡಿಗೋಡು ಎಸ್ಟೇಟ್,
ಸಿದ್ದಾಪುರ, ಕೊಡಗು

ESTATE KUMBLIES.

Wholesale Dealers. Moderate prices,

We suppiy good and fresh Kumblies direct from the manufacturers in wholesale and cheap rates avoiding the middleman's profits and commission. Please place a trial order and compare the favourable rates All orders will be promptly delivered at the Estates at cost price.

Please apply to—

Messrs. G NAGAPPA,
Kumbly Merchants & Dealers in Rugs and Carpets,
Chikpet,
4—3 Bangalore City.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂಡಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮೆಯ್ಯನವರು,
ಹುದಿಕೇರಿ & ತಿತಿಮತಿ—ಮೆ. ಜಿ. ಮೂಡಮ್ಮೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,
ಸೋಮವಾರಪೇಟೆ—ಮೆ. ಕೆ. ವೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಪ. ಜವಹ್ಹರಿಲಾಲರ ಭಾಷಣ.

(3ನೇ ಪುಟದಿಂದ ಸಾಗಿದ್ದು)

ಳ ರಾಷ್ಟ್ರೀಯತೆಗೂ ಪಾಶ್ಚಿಮಾತ್ಯ ಫ್ಯಾಸಿಸ್ಟ್ ದೇಶಗಳ ಭಯಂಕರವಾದ ಸಂಕುಚಿತ ರಾಷ್ಟ್ರೀಯತೆಗೂ ವ್ಯತ್ಯಾಸವುಂಟು. ಪೂರ್ವ ದೇಶಗಳ ರಾಷ್ಟ್ರೀಯತೆಯು ಸ್ವಾತಂತ್ರ್ಯಕ್ಕಾಗಿಯೂ ಸಾಮ್ರಾಜ್ಯಶಾಹಿ ಪ್ರಯತ್ನಗಳು.

ಈ ಮಹಾ ಸಂಗ್ರಾಮವು ಪ್ರಪಂಚದಲ್ಲಿ ಬೆಳೆದಂತೆಲ್ಲಾ ಅನೇಕ ಧನಾಢ್ಯತ್ವದ ಇಂಪೀರಿಯಲಿಸ್ಟ್ ದೇಶಗಳೂ ಅಧೋಗತಿಗೆ ಇಳಿಯುತ್ತಿವೆ. ಇಳಿಯುತ್ತಿರುವೆ ಆ ಜನಾಂಗಗಳನ್ನು ಫಾಸಿಸಂ ಅಥವಾ ನಾಜಿಸಂ ಅಥವಾ ನ್ಯಾಷನಲ್ ಸರ್ಕಾರಗಳೆಂಬ ಹೆಸರಿನಿಂದ ಬಲಪಡಿಸಲು ಯತ್ನಗಳು ನಡೆಯುತ್ತಿವೆ. ನಮ್ಮ ಇಂಡಿಯಾದಲ್ಲಿಯೂ ಕಳೆದ ಕೆಲವು ವರ್ಷಗಳಲ್ಲಿ ಈ ರೀತಿಯ ಪ್ರಯತ್ನಗಳು ನಡೆದಿವೆ. ನಮ್ಮ ಜನಾಂಗದಲ್ಲಿ ರಾಷ್ಟ್ರೀಯ ಉದ್ಯಮವು ಎಷ್ಟು ಹೆಚ್ಚಾಗಿ ಬೆಳೆಯತೊಡಗಿದರೆ—ಅಷ್ಟು ಜೋರಾಗಿ ನಮ್ಮ ಮೇಲೆ ಹಿಜ್ಬಾಳಿಕೆಯನ್ನು ಪ್ರಯೋಗಿಸಿ ನಮ್ಮಲ್ಲಿ ಒಡಕನ್ನು ತಂದು ಹಾಕಿ ತಮ್ಮ ಜೊತೆಗೆ ಜನಗಳನ್ನು ಎಳೆದುಕೊಳ್ಳುವ ಪ್ರಯತ್ನಗಳು ಇಲ್ಲೂ ನಡೆಯುತ್ತಿವೆ.

ಸರಕಾರದ ಅಸಹನೆ.

ರಾಷ್ಟ್ರೀಯ ಚಳವಳಿಯೆಂದರೆ ಇಂಪೀರಿಯಲಿಸ್ಟರು ಹೆದರುತ್ತಾರೆ. ಅವರ ಅಪೇಕ್ಷೆಗಳು ಅಲೋಚನೆಗಳಾಗುತ್ತವೆ. ಅವರ ಅನುಮಾನಗಳು ಸಂಗತಿಗಳಾಗುತ್ತವೆ. ಇವೆಲ್ಲಾ ಅ ಫಿಷಿಲ್ (ಸರ್ಕಾರಿ) ಪ್ರಕಟಣೆಗಳಲ್ಲಿ ಘೋಷವಾಗುತ್ತವೆ. ಇವುಗಳ ಮೇಲೆ ಬ್ರಿಟಿಷ್ ಸರ್ಕಾರದ ಗಾಂಭೀರ್ಯವು ಇಂಡಿಯದಲ್ಲಿ ನೆಲೆಸಿರುತ್ತದೆ. ಜನರು ಬಂದಿಖಾನೆಗಳಲ್ಲಿಯೂ ಡಿಟಿನ್‌ಷನ್ ಕ್ಯಾಂಪಿನಲ್ಲಿಯೂ ಅಪಾಡಿನೆ ಅಥವಾ ವಿಚಾರಣೆಗಳಿಲ್ಲದೆ ಇಡಲ್ಪಡುತ್ತಾರೆ. ನಿರಂಕುಶ ಶಕ್ತಿಯು ಜನನೀತಿಯನ್ನು ಕೆಡಿಸಿ ಅವರನ್ನು ಅಧಃಪತನಕ್ಕೆ ತಳ್ಳಿ ಹೀನಾತಿಹೀನ ಸ್ಥಿತಿಗೆ ತರುತಲಿದೆಂಬುದು ನನ್ನ ಮನಸ್ಸಿನಲ್ಲಿ ಬೇರೂರುತ್ತಿದೆ. ನಾನು ಕೆಲವು ವೇಳೆ ಎಸೆಂಬ್ಲಿ ಮೊಟ್ಟುಗುಗಳ ಈಚಿನ ವರದಿಗಳನ್ನು ಓದುತ್ತಿದ್ದೇನೆ. 10 ವರ್ಷದ ಹಿಂದೆ ಎಸೆಂಬ್ಲಿಯಲ್ಲಿ ನಡೆಯುತ್ತಿದ್ದ ಭಾಷಣಗಳ ಧ್ವನಿಗೂ, ಈಗ ನಡೆಯುತ್ತಿರುವ ಭಾಷಣಗಳ ಧ್ವನಿಗೂ ಎಷ್ಟು ವ್ಯತ್ಯಾಸವಿದೆಯೆಂಬುದನ್ನು ನಾನು ನೋಡಿದ್ದೇನೆ. ತಿಲಕ್ ಸ್ವರಾಜ್ಯ ಫಂಡಿಗೆ ನಿರ್ದೇಶ ಮಾಡಿ ಕಾಂಗ್ರೆಸಿನ ಹೆಸರನ್ನು ಕೆಡಿಸುವ ಒಲತ್ಕಾರದ ಪ್ರಯತ್ನಗಳು ನಡೆಯುತ್ತಿರುವುದನ್ನು ನಾನು ನೋಡಿದ್ದೇನೆ. ನಾನು ಅನೇಕ ವರ್ಷಗಳ ಕಾಲ ಕಾಂಗ್ರೆಸಿನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಪ್ರೀಯರಾದ ಮುಖಂಡ ರಾಜೇಂದ್ರ ಬಾಬುರವರ ವಿಷಯದಲ್ಲಿ ಬೀಹಾರ್ ಪರಿಹಾರದ ಬಗ್ಗೆ ಹೀನಾಯವಾದ ಅಪವಾದನೆಗಳನ್ನು ನೋಡಿ ನನಗೆ ಆಶ್ಚರ್ಯವಾಯಿತು. ಬೀಹಾರ್ ಭೂಕಂಪವು ಸಂಭವಿಸಿದ ಕೂಡಲೇ ಅಧಿಕಾರಿಗಳ ಅಸಾಮರ್ಥ್ಯದ ಬಗ್ಗೆ ನಾನು ತೂಡಿದ ಸೌಮ್ಯವಾದ ಟೀಕೆಯು ಅವರಿಗೆ ಅತ್ಯಂತ ಕೋಪವನ್ನುಂಟುಮಾಡಿತು. ಏಕೆಂದರೆ ಅವರ ನಿಜವನ್ನು ಅವರೇ ಅರಿತರು. ಈಚೆಗೆ ಸಂಭವಿಸಿದ ಭೂಕಂಪದ ವಿಷಯವಾಗಿ ಅಧಿಕಾರಿ ವರ್ಗದವರು ಮಾಡಿದ ವಿವರಾಡುಗಳನ್ನು ಟೀಕಿಸಿದ ವರ್ತಮಾನ ಪತ್ರಿಕೆಗಳು ಬಹುವಾಗಿ ಶಿಕ್ಷಿಸಲ್ಪಟ್ಟವು. ಅವುಗಳು ತುಳಿಯಲ್ಪಟ್ಟವು ಸರ್ಕಾರದ ಅತ್ಯಂತ ಸುಕುಮಾರವಾದ ಚರ್ಮಕ್ಕೆ ಎಷ್ಟೇ ಮೃದುವಾದ ಟೀಕೆಯಾಗಲೀ ನೋವುಂಟುಮಾಡುತ್ತದೆ. ಈ ನೋವಿನ ಪ್ರತಿಕ್ರಿಯೆಗಳು ರಭಸವಾಗಿಯೂ ಇರುತ್ತವೆ. ಸರ್ಕಾರವು ಎಷ್ಟೆಷ್ಟು ಅಸಾಮರ್ಥತೆಗೆ ಇಳಿಯುತ್ತದೆಯೋ ಅಷ್ಟಷ್ಟೂ ಅದು ಟೀಕೆಯಲ್ಲಿ ಅಸಹನೆಯನ್ನು ತೋರಿಸುತ್ತದೆ. ತಾನು ಹೇಗಿದ್ದಾರ್ಗ್ಯೂ ಇತರರ ವಿಷಯವಾಗಿ ಲಕ್ಷ್ಯವಿಲ್ಲದೆ ಅಪವಾದನೆ ಮಾಡುವುದಕ್ಕೆ ಅದು ಹಿಂಜರಿಯುವುದಿಲ್ಲ.

ಶ್ರೀ ಸುಬಾಷ್ ಬೋಸರು,

ಈಚೆಗೆ ನಿನಗೆ ತಿಳಿದಂತೆ ಇಂಡಿಯಾದಲ್ಲಿ ಸರ್ಕಾರವು ಯಾವ ರೀತಿಯಾಗಿ ವರ್ತಿಸುತ್ತಿದೆ ಎಂಬುದು ನಮಗೆ ಪ್ರಿಯರೂ, ಮಾನ್ಯರೂ ಆದ ಒಡನಾಡಿ ಸುಬಾಷ್ ಚಂದ್ರಬೋಸರ ವಿಷಯದಲ್ಲಿ ಸರ್ಕಾರದವರು ಕೊಟ್ಟಿರುವ ಎಚ್ಚರಿಕೆಯೂ (ತದನಂತರ ನಡವಳಿಕೆಯೂ) ಒಂದು ಉದಾಹರಣೆಯಾಗಿದೆ. ಸುಬಾಷ್ ಚಂದ್ರಬೋಸರನ್ನು ಬಲ್ಲ ನನಗೆ ಅವರ ಮೇಲೆ ತಂದ ಆಪಾದನೆಗಳು ಎಷ್ಟು ಕ್ಷುಲ್ಲಕವಾದವು ಎಂಬುದು ಗೊತ್ತಾಗುತ್ತದೆ. ಅವುಗಳಲ್ಲಿ ಎನಾದರೂ ಸ್ವಲ್ಪ ಕಾರ್ಯವಿದ್ದರೂ ಅವರಿಗೆ ಸರ್ಕಾರವು ಒಹಳ ದಿನಗಳಿಂದಲೂ ತೋರಿಸಿರುವ ವರ್ತನೆಯು ನನಗೆ ಸಹನೆಯನ್ನುಂಟುಮಾಡಲಾರದು.

ಬಂಗಾಳ ಮತ್ತು ಸರಹದ್ದಿನ ಪ್ರಾಂತ್ಯದಲ್ಲಿ ಹಿಂಸಾವರ್ಧಕ ವಿಧಾನಗಳು.

ಈ ಉದಾಹರಣೆಯು ನಮ್ಮನ್ನು ಅದಕ್ಕಿಂತ ವಿಶಾಲವಾದ ಸಮಸ್ಯೆಯ ಅಲೋಚನೆಗೆ ಒಯ್ಯುತ್ತದೆ. ಟೆರರಿಸಂ ಅಥವಾ ಕ್ರಾಂತಿಯೆಂಬ ಹೆದರಿಕೆಯನ್ನು ಹುಟ್ಟಿಸಿ, ಅದರ ಉಪಯೋಗವನ್ನು ತೆಗೆದುಕೊಂಡ ಸರ್ಕಾರದವರು ರಾಜಕೀಯ ಜಟುವಟಿಕೆಯನ್ನು ಯಾವ ರೀತಿಯಾಗಿ ಮುರಿಯುತ್ತಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಮತ್ತು ಸುಂದರವಾದ ಬಂಗಾಳ ಪ್ರಾಂತ್ಯವನ್ನು ದೈಹಿಕವಾಗಿಯೂ, ಮಾನಸಿಕವಾಗಿಯೂ ಯಾವ ರೀತಿಯಾಗಿ ಕಾಲು ಮುರಿಯುತ್ತಿದ್ದಾರೆಂಬುದು ಗೊತ್ತಾಗುತ್ತದೆ. ನಿಮಗೆ ತಿಳಿದ ಹಾಗೆ ಟೆರರಿಸಂ ಅಥವಾ ಹಿಂಸಾವಾದಿತ್ವವು ಒಂಗಾಳದಲ್ಲಾಗಲೀ ಅಥವಾ ಇಂಡಿಯಾದ ಯಾವ ಭಾಗದಲ್ಲೇ ಆಗಲೀ ಈಗ ಇಲ್ಲ. ಟೆರರಿಸಂ ಅಥವಾ ಹಿಂಸಾವಾದಿತ್ವವು ಒಂದು ಜನಾಂಗದ ರಾಜಕೀಯ ಅಪರಿಪಕ್ವತೆಯ ಒಂದು ಚಿಹ್ನೆ. ಪ್ರಜಾಸ್ವಭುತ್ವ, ರಾಜ್ಯಾಂಗ ರಚನೆ ಇಲ್ಲದ ಕಡೆ ಕಾನ್‌ಸ್ಪಟ್ಯೂಷನಲಿಸಂ ಅಥವಾ ಶಾಸನ ರೀತ್ಯಾ ಚಳವಳಿ ನಡೆಯುವುದು ರಾಜಕೀಯ ಸೈದ್ಧಾಂತ್ಯದ (ಅರುಳು ಮರುಳು) ಒಂದು ಚಿಹ್ನೆ. ನಮ್ಮ ರಾಷ್ಟ್ರೀಯ ಚಳವಳಿಯು ಆ ಅಪರಿಪಕ್ವ ಸ್ಥಿತಿಯನ್ನು ಬಹಳ ಹಿಂದೆಯೇ ಏಸರಿ ಬಿಟ್ಟಿದೆ ಹಿಂದೆ ಟೆರರಿಸ್ಟ್ ಕೃತ್ಯಗಳಲ್ಲಿ ತೊಡಗಿದ್ದ ಹಲಕೆಲವು ವ್ಯಕ್ತಿಗಳು ಆ ವಿಷಾದಮಯ ಮತ್ತು ನಿಷ್ಫಲ ರಾಜಕೀಯ ತತ್ವವನ್ನು ತ್ಯಜಿಸಿದ್ದಾರೆ. ಕಾಂಗ್ರೆಸು ಶಾಂತಿಯುತ ಮತ್ತು ಪರಿಣಾಮಕಾರಿಯಾದ ಕಾರ್ಯಕ್ರಮದ ಮೇಲೆ ಪ್ರಾಮುಖ್ಯತೆಯನ್ನು ಒತ್ತಿ ದೇಶದ ಯುವಕರನ್ನು ತನ್ನ ಅವರಣಕ್ಕೇ ಎಳೆದುಕೊಂಡಿದೆ.

ನಮ್ಮಲ್ಲಿನ ಒಡಕು.

ಸಂಣ ಸಂಣ ಅಂಶಗಳ ಮೇಲೆ ಜಗಳವಾಡುತ್ತೇವೆ ನಾವು ಪ್ರಜಾ ಸಮುದಾಯದ ಸಂಪರ್ಕವನ್ನು ತೊರೆದಿದ್ದೇವೆ ಪ್ರಜಾ ಸಮುದಾಯದಿಂದ ನಮಗೆ ಹರಿಯುವ ಅನ್ಯೂತಮಯವಾದ ಶಕ್ತಿಯನ್ನು ಕಳೆದುಕೊಂಡಿದ್ದೇವೆ, ನಮ್ಮ ಸಂಸ್ಥೆಯು ಚಿಕ್ಕದಾಗಿ ತನಗಿದ್ದ ಶಕ್ತಿಯನ್ನೆಲ್ಲಾ ಕಳೆದುಕೊಂಡಿದೆ. ಮೊದಲನೇ ವಿಷಯಗಳು ಯಾವಾಗಲೂ ಮೊದಲು ಬರಬೇಕು. ಅದನ್ನು ನಾವು ಮರೆತಿದ್ದೇವೆ. ಮುಖ್ಯವಾದ ಗೌಣ ವಿಷಯಗಳ ವೆಲೆ ವಾದವೂಡಿ ವ್ಯರ್ಥ ವೂಡುತ್ತಿದ್ದೇವೆ ನಾವು ದಿಕ್ಕು ನೆಲೆಯಿಲ್ಲದೆ ಎಲ್ಲವನ್ನೂ ಕಳೆದುಕೊಳ್ಳುವ ಅಪಾಯ ಸ್ಥಿತಿಯಲ್ಲಿದ್ದೇವೆ.

ಮಧ್ಯವರ್ಗದವರ ಮುಖಂಡತ್ವದವರ ಲೋಪ ದೋಷ.

ಹಿಂದೆ ನಮ್ಮ ನೇರವಾದ ಕಾರ್ಯಕ್ರಮದ ಸಂಗ್ರಾಮಗಳು ಜನಸಮುದಾಯದ ಆಧಾರದ ಮೇಲೆ ನಿಂತಿದ್ದವು. ಮುಖ್ಯವಾಗಿ ರೈತಾಪಿ ವರ್ಗದ ಆಧಾರದ ಮೇಲೆ ಇದ್ದವು. ಆ ಹಿರಿ ಚಳವಳಿಕ್ಕೆ ಬೆನ್ನು ಮೂಳೆಯೂ, ಮುಖಂಡತ್ವವು ಯಾವಾಗಲೂ ಮಧ್ಯವರ್ಗದವರಿಂದ ಸರಬರಾಯಿ ಮಾಡಲ್ಪಡುತ್ತಿತ್ತು. ನಮ್ಮ ಪರಿಸ್ಥಿತಿಯಲ್ಲಿ ಇದು ಅಪರಿಹಾರವಾದ ವೂರ್ಗ, ಮಧ್ಯವರ್ಗದವರು ಒಂದು ಗುಂಪು, ಅನಿರ್ದಿಷ್ಟ ಗುಂಪು ಅಥವಾ ಗುಂಪುಗಳು. ಮೇಲುಗಡೆ ಅವರಲ್ಲಿ ಕೆಲವರು ಬ್ರಿಟಿಷ್ ಇಂಪೀರಿಯಲಿ ನಮ್ಮೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದಾರೆ. ಎಲ್ಲಕ್ಕಿಂತ ಒಳಗೆ ಅಸ್ಪೃಶ್ಯತೆಗಳನ್ನು ಕಳೆದುಕೊಂಡ ಇತರ ಗುಂಪಿನವರಿದ್ದಾರೆ. ಇವರು ಕ್ರಮಕ್ರಮವಾಗಿ ಆರ್ಥಿಕ ಪರಿಸ್ಥಿತಿಗಳಿಂದ ತುಳಿಯಲ್ಪಟ್ಟಿದ್ದಾರೆ. ಈ ಗುಂಪಿನವರಿಂದಲೇ ಮುಂಬರಿದ ರಾಜಕೀಯ ಕಲಸಗಾರರೂ ಮತ್ತು ಕ್ರಾಂತಿಕಾರಿಯೂ ಹೊಂಟಿದ್ದಾರೆ. ಈ ಮೇಲಿನ ಮತ್ತು ಕೆಳಗಿನ ಗುಂಪುಗಳ ನಡುವೆ ಮಧ್ಯ ಗುಂಪಿನವರಿದ್ದಾರೆ. ಇವರು ಯಾವಾಗಲೂ ಮುಂದಿರಿದ ಗುಂಪುಗಳ ಜೊತೆಗೆ ಸೇರಿರುತ್ತಾರೆ. ಆದರೆ ಇವರಿಗೆ ಮೇಲುವರ್ಗದವರ ಗುಂಪಿನವರೊಂದಿಗೆ ಸಂಬಂಧಗಳುಂಟು. ಅವರ ಶ್ರೇಷ್ಠ ಡರ್ಜೆಗಳನ್ನು ಸೇರುವ ಆಶೆಯಲ್ಲಿ ಇವರು ಜೀವಿಸುತ್ತಾರೆ. ಆದುದರಿಂದ ಮಧ್ಯ ವರ್ಗದ ಮುಖಂಡತ್ವವು ಒಂದು ರೀತಿಯಾದ ಜಡುರಿ ಹೋದ ಮುಖಂಡತ್ವ.

ಕಾಂಗ್ರೆಸು ಪ್ರಜಾ ಸಮುದಾಯದ್ದಾಗಬೇಕು.

ಹಾಗಾದರೆ ಈ ಸಮಸ್ಯೆಯನ್ನು ಬಗೆಹರಿಸುವುದಾದರೂ ಹೇಗೆ? ತಪ್ಪದೆ ನಾವು ಮಧ್ಯವರ್ಗದವರ ಮುಖಂಡತ್ವವನ್ನು ಹೊಂದಬೇಕು. ಆದರೆ ಈ ಮುಖಂಡತ್ವವು ಹೆಚ್ಚು ಹೆಚ್ಚಾಗಿ ಜನಸಮುದಾಯದ ಕಡೆ ನೋಡಬೇಕು. ಮತ್ತು ತಮ್ಮ ಶಕ್ತಿಯನ್ನೂ, ಪ್ರೇರಣೆಯನ್ನೂ ಪ್ರಜಾ ಸಮುದಾಯದಿಂದ ಆಕರ್ಷಿಸಬೇಕು. ಕಾಂಗ್ರೆಸು ಅದು ಹೇಳಿಕೊಳ್ಳುವಂತೆ ಪ್ರಜಾ ಸಮುದಾಯದಿಂದ ಆಕರ್ಷಿಸಬೇಕು. ಕಾಂಗ್ರೆಸು ಅದು ಹೇಳಿಕೊಳ್ಳುವಂತೆ ಪ್ರಜಾ ಸಮುದಾಯಕ್ಕಾಗಿ ಇರುವುದೂ ಮಾತ್ರವಲ್ಲದೆ ಪ್ರಜಾ ಸಮುದಾಯದ್ದೇ ಆಗಿರಬೇಕು.

(ಮುಂದುವರಿಯುವುದು.)

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮೋರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಒಲುಮೆಯು ಈ ಸಂಸ್ಥೆಯಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯಜೀತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮೋಪತ್ರದ ಮೇಲೆ,—

ವರ್ಷ 1ಕ್ಕೆ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಾಜಿದ ಹಿಂದೀ ವಿಮೋಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮೋಹಿತಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಳಿಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—9)

ಸುಂಟಿಕೊಪ್ಪ ಏಜಂಟರು—
ಎ. ಎಸ್. ಮೂಚಯ್ಯನವರು,
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಡಾಕ್ಟರ್ ಮೋತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—1]

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ
ಕರ್ಕಕಂಪನಿ ೧೮೯೩
ಜ್ವರದ ಗುಳಿಗೆಗಳು.
ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.
ಗಣೇಶ ರಾಮಚಂದ್ರ ಕರ್ಕಿ,
(21—29) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

SHIRCMANI NARAYANACHARYA
Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಆದ್ಯ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಒಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ಏನಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಕಟ, 1 ಕಾಶೀ ನಕ್ಷೆ, 1 ಕಾಶಿ ಪಕ್ಷಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—34 ಚೌಖಂಬಾ ಬೆನಾರಿಸ್, (ಕಾಶೀ)

ಮೂರಾಟಕ್ಕೆ ಸಿದ್ಧವಾಗಿವೆ.
ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ವಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಾಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರೀದಿ ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ತಂ ಒಪ್ಪಿಗೆ ಫಾರಮುಗಳೂ, ಜಾಮೀನು ಖರೀದಿ ಫಾರಮುಗಳೂ, ಸೆಕ್ರೇರ್ ಕೇಪರ್ ಖರೀದಿ ಫಾರಮುಗಳೂ ಶಿವಜಿರ್ ಪುಸ್ತಕಗಳೂ, ರಸೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಮತ್ತು ಜೆಂ ಪುಸ್ತಕಗಳೂ ಸಮ್ಮತ ದರ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಬಿಗಿದವರು ಆರ್ಡರ್ ಕೂಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.
ಶಿಕಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,
26—26 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ
ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:
ಅಧ್ಯಕ್ಷರು—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.
ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.
ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.
ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನವೊರ್ತಿ ನಂಬಿರಿ.
ಪತಿವ್ರತೆಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ವಿಶೇಷವಿಸಿ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸ್ಮಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.
ಹೆಚ ್ಚಿನ ವಿವರಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಬ್ರೀಫ್ ಏಜೆಂಟ್,
26—39 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು
"ಮೈಸೂರು ಗಂಧದ ಸಾಬೂನು."



ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—8 ಬಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೆಬಿದ್ದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊತ್ತಿಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರವಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರರು ಲೆಕ್ಕ ಆಡಿಮಾಯಿಸಿಕೆ ಮಾಡುತ್ತಾರೆ.

ಪೈಸಿಜೆಂಟರು,
ಪಂಡ್ಯಂಡ ಐ. ಬೆಳ್ಯಪ್ಪನವರು.

ಪ್ರೈಜರ್,
ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದಿದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾದ್ದಾಗಿರುತ್ತಿರಲಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ತಿಂದು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಗೆ ತೀವ್ರ, ಕಷ್ಟ ವೊಪಲಾಪ ರೋಗಗಳಿಗೀಡಾಗಿರುವಾಗಲೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಲಗರ ಬಾಲಾಮೃತವನ್ನು

ಕೊಡಬೇಕು. ಡೋಲಗರ ಬಾಲಮೃತವು ಒಂದು ಟಾನಿಕ್. ಎಲ್ಲಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—
ಶ್ರೀ. ಟಿ. ಡೋಲಗರೆ ಕಂಪೆನಿ,
(52-8 ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—22

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ
ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹುಟ್ಟುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಟಿಕ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಮತ್ತು ಇವರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪ್ರದೇಶದಲ್ಲಿ ಧಾರಾಳವಾಗಿ ಮಾರಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಶುದ್ಧ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮುಖ್ಯ ರಾಸಾಯನಿಕ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣಿಳಿಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವು ಬರುವುದು. ಇದರಿಂದ ಸಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸುತರಾಂ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವವರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವ್.)

52—33 ಕೊಡಗಿನ ಏಜಂಟರು:—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ
ಎ. ಎನ್ ಹುಚ್ಚಯ್ಯ, ವರ್ಕಂಟ್, ಗೋಣಿಕೊಪ್ಪಲು.

ಭಕ್ತಾ ಬ್ರದರ್ಸ್, ಕಾಸರಗೋಡು.]

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ
ಜೀವ ವಿಮೆ ಕಂಪೆನಿ ಲಿಮಿಟೆಡ್.

೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಮುಗಳಿಗೆ ಕೊಟ್ಟ ಒಟ್ಟು ಹಣ	ರೂ	16,29,88,814
ಫಂಡ್ಸ್ ಹೆಚ್ಚಿದ್ದು	ರೂ	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ಏಜೆನ್ಸಿ ತೆಗೆಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಲಾಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಅಮೃತಸರಾಬಾದು	ಗಂಟಕ್	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಚೆನ್ನೈ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—15

ಯಂ. ವಿ. ಪುರುತ್ತಾಧೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P. I. Pellippa, at 'Kodagu' Press, Mercara for "Kodagu" Ltd.